ಸಂಪುಟ: 01 ಸಂಚಿಕೆ: 83 ಪುಟ: 04 ಬೆಲೆ: 02 ಭಾನುವಾರ ಸೆಪ್ಟೆಂಬರ್ 06 2026 ಮೊ: 7411699198/7406928404

# ಅಜಾತ ಶತ್ರು

ಜನರ ನುಡಿ.... ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ ಸತ್ಯದ ಧ್ವನಿ...
ಕನ್ನಡ ದಿನ ಪತ್ರಿಕೆ

ಪ್ರದೀಪಕುಮಾರ
ಸಂಪಾದಕರು




Volume:01 Issue: 83 Pages:04 Price:02 SUNDAY SEPTEMBER 06 2026 RNI NO: KNKAN/26/A4008 E-mail:ajathashathru2026@gmail.com

## ಸತ್ಯವಾಣಿ ಕಟೋಕ್ತಿ



ಕಥಾವೃತ್ತ ಅರ್ಥವಾದರೂ ಅರ್ಥವಾಗದಂತೆ ನಟಿಸುವ ನಟನ ಚತುರರಿಗೆ ರಂಗಸ್ಥಳ ಬಿಟ್ಟುಕೊಟ್ಟು ನಿರಾಳವಾಗಿ ನಾಟಕ ವೀಕ್ಷಿಸುವುದೇ ಜಾಣತನ.

ವಾಣಿ ಭಂಡಾರಿ.

# ಲೋಕಾಯುಕ್ತ ಎಸ್‌ಪಿ ಹೆಚ್ಚುವರಿ ಮಹಾನಿಂಗ ನಂದಗಾವಿ ಆಯ್ಕೆ

ಅ.ಶ. ಸುದ್ದಿ ವಿಜಯಪುರ

**ವಿಜಯಪುರ:** ವಿಜಯಪುರ ಲೋಕಾಯುಕ್ತ ಪೊಲೀಸ್ ಅಧೀಕ್ಷಕರ ಹುದ್ದೆಯ ಹೆಚ್ಚುವರಿ ಪ್ರಭಾರವನ್ನು 2018ನೇ ಬ್ಯಾಚ್‌ನ ಐಪಿಎಸ್ ಅಧಿಕಾರಿ ಮಹಾನಿಂಗ ನಂದಗಾವಿ ಅವರು ಬುಧವಾರ ವಹಿಸಿಕೊಂಡರು.



ಲೋಕಾಯುಕ್ತ ಕಚೇರಿಗೆ ಸಂಬಂಧಿಸಿದಂತೆ ಸಾರ್ವಜನಿಕರು ಯಾವುದೇ ದೂರು ಅಥವಾ ಅಹವಾಲುಗಳನ್ನು ಹೊಂದಿದ್ದಲ್ಲಿ ನೇರವಾಗಿ ಕಚೇರಿಗೆ ಭೇಟಿ ನೀಡಿ ಸಲ್ಲಿಸಬಹುದಾಗಿದೆ. ದೂರು ಹಾಗೂ ಅಹವಾಲುಗಳ ಕುರಿತು ಹೆಚ್ಚಿನ ಮಾಹಿತಿಗಾಗಿ 9364062528 ಮೊಬೈಲ್ ಸಂಖ್ಯೆ ಅಥವಾ 08352–295074 ಕಚೇರಿ ದೂರವಾಣಿ ಸಂಖ್ಯೆಗೆ ಸಂಪರ್ಕಿಸಬಹುದು ಎಂದು ಲೋಕಾಯುಕ್ತ ಕಚೇರಿ ಪ್ರಕಟಣೆಯಲ್ಲಿ ತಿಳಿಸಿದೆ.

# ಆಕಾಶದಲ್ಲೇ ಹೈಡ್ರಾಲಿಕ್ ವ್ಯವಸ್ಥೆ ಸ್ಥಗಿತ : ಏರ್ ಇಂಡಿಯಾ

# ವಿಮಾನ ಸುರಕ್ಷಿತ ಲ್ಯಾಂಡಿಂಗ್, ಪ್ರಯಾಣಿಕರು ಸೇಫ್

**ನವದೆಹಲಿ:** ಆಗಸದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡ ಏರ್ ಇಂಡಿಯಾ ವಿಮಾನವೊಂದು ದೆಹಲಿ ವಿಮಾನ ನಿಲ್ದಾಣದಲ್ಲಿ ಸುರಕ್ಷಿತವಾಗಿ ಇಳಿದಿದ್ದು, ವಿಮಾನದಲ್ಲಿದ್ದ 24 ಪ್ರಯಾಣಿಕರು ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ. ಫುಕೆಟ್‌ನಿಂದ ನವದೆಹಲಿಗೆ ತೆರಳುತ್ತಿದ್ದ ಏರ್ ಇಂಡಿಯಾ ವಿಮಾನವು 36 ಸಾವಿರ ಅಡಿ ಎತ್ತರದಲ್ಲಿ ಹಾರಾಟ ನಡೆಸುತ್ತಿದ್ದ ವೇಳೆ ಕೆಲವೇ ಸೆಕೆಂಡುಗಳ ಅಂತರದಲ್ಲಿ ಮೂರು ಹೈಡ್ರಾಲಿಕ್ ವ್ಯವಸ್ಥೆಗಳು ಸ್ಥಗಿತಗೊಂಡು ಆತಂಕದ ಪರಿಸ್ಥಿತಿ ನಿರ್ಮಾಣವಾಗಿತ್ತು.

ಹಠಾತ್ ಏರುಪೇರಿನಿಂದಾಗಿ ಕ್ಯಾಬಿನ್‌ನಲ್ಲಿದ್ದ 24 ಪ್ರಯಾಣಿಕರು ಗಾಯಗೊಂಡಿದ್ದು, ಆಟೋಪೈಲಟ್ ಸಂಪರ್ಕ ಕಡಿತಗೊಂಡಿತ್ತು. ಬಳಿಕ ವಿಮಾನವನ್ನು ಸುರಕ್ಷಿತವಾಗಿ ದೆಹಲಿ ವಿಮಾನ ನಿಲ್ದಾಣದಲ್ಲಿ ಇಳಿಸಲಾಯಿತು.

ಕೆಲವೇ ಸೆಕೆಂಡುಗಳಲ್ಲಿ ಏರುಪೇರು ವಿಮಾನ ಅಪಘಾತ ತನಿಖಾ ಬ್ಯೂರೋ (ಎಎಐಬಿ) ಬಿಡುಗಡೆ ಮಾಡಿರುವ ಪ್ರಾಥಮಿಕ ವರದಿಯಲ್ಲಿ ತಾಂತ್ರಿಕ ವೈಫಲ್ಯಕ್ಕೆ ನಿಖರ ಕಾರಣವನ್ನು ಇನ್ನೂ ತಿಳಿಸಲಾಗಿಲ್ಲ. ವಿಮಾನ ಕೋಲ್ಕತ್ತಾ ವಾಯು ಪ್ರದೇಶದ ಮೇಲೆ 36 ಸಾವಿರ ಅಡಿ ಎತ್ತರದಲ್ಲಿ ಹಾರುತ್ತಿದ್ದಾಗ ಮೊದಲು ಗ್ರೀನ್, ನಂತರ ಬ್ಲೂ ಹಾಗೂ ಯೆಲ್ಲೋ




ಹೈಡ್ರಾಲಿಕ್ ವ್ಯವಸ್ಥೆಗಳು ನಿಷ್ಕ್ರಿಯಗೊಂಡಿದ್ದವು. ತಕ್ಷಣ ಆಟೋಪೈಲಟ್ ಸಂಪರ್ಕ ಕಡಿತಗೊಂಡು ಎಚ್ಚರಿಕೆಯ ಸೈರನ್ ಮೊಳಗಿತು. ವಿಮಾನ ಕೆಲವೇ ಸೆಕೆಂಡುಗಳಲ್ಲಿ ಸುಮಾರು 372 ಅಡಿಗಳಷ್ಟು ಮೇಲಕ್ಕೆದ್ದು, ಬಳಿಕ ದಿಢೀರನೆ 292 ಅಡಿಗಳಷ್ಟು ಕೆಳಕ್ಕೆ ಕುಸಿದಿದೆ. ಅದೃಷ್ಟವಶಾತ್ ಕೆಲವೇ ಕ್ಷಣಗಳಲ್ಲಿ ಬ್ಲೂ ಹೈಡ್ರಾಲಿಕ್ ವ್ಯವಸ್ಥೆ ಮತ್ತೆ ಕಾರ್ಯನಿರ್ವಹಿಸಲು ಆರಂಭಿಸಿತು. ಬಳಿಕ ಯೆಲ್ಲೋ ಮತ್ತು ಗ್ರೀನ್ ವ್ಯವಸ್ಥೆಗಳೂ ನಿಯಂತ್ರಣಕ್ಕೆ ಬಂದಿದ್ದು, ಪೈಲಟ್‌ಗಳು ವಿಮಾನವನ್ನು ಸುರಕ್ಷಿತವಾಗಿ ದೆಹಲಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕ್ಯಾಬಿನ್‌ಗೆ ಹಾನಿ ವಿಮಾನದಲ್ಲಿನ ತೀವ್ರ ಏರುಪೇರಿನಿಂದ ಸೀಲಿಂಗ್

> ಪೈಲಟ್ ಮಾದಕ ದ್ರವ್ಯ ಸೇವನೆ ದೃಢ ವಿಮಾನ ದೆಹಲಿಯಲ್ಲಿ ಇಳಿದ ಬಳಿಕ ಸಿಬ್ಬಂದಿಗೆ ನಡೆಸಿದ ಪರೀಕ್ಷೆಯಲ್ಲಿ ಮುಖ್ಯ ಪೈಲಟ್ ದೇಹದಲ್ಲಿ ನಿಷೇಧಿತ ಮನೋ–ಸಕ್ರಿಯ ಪದಾರ್ಥಗಳು ಇರುವುದು ಪತ್ತೆಯಾಗಿದೆ. ಸಹ–ಪೈಲಟ್‌ನ ಪರೀಕ್ಷೆ ನೆಗೆಟಿವ್ ಬಂದಿದೆ. ವಾಯುಯಾನ ಸುರಕ್ಷತಾ ನಿಯಮಗಳ ಅಡಿಯಲ್ಲಿ ಏರ್ ಇಂಡಿಯಾ ಮುಖ್ಯ ಪೈಲಟ್ ವಿರುದ್ಧ ತಕ್ಷಣದಿಂದಲೇ ಜಾರಿಗೆ ಬರುವಂತೆ ಸೇವೆಯಿಂದ ವಜಾಗೊಳಿಸುವ ಕ್ರಮ ಕೈಗೊಂಡಿದೆ.

ಪ್ಯಾನೆಲ್‌ಗಳು ಮುರಿದುಬಿದ್ದಿವೆ. ಲಗೇಜ್ ಬಾಕ್ಸ್‌ಗಳು ತೆರೆದುಕೊಂಡಿದ್ದು, ತುರ್ತು ನಿರ್ಗಮನ ಬಾಗಿಲಿನ ಹ್ಯಾಂಡಲ್ ಹಾಗೂ ಶೌಚಾಲಯದ ಕಮೋಡ್ ಕೂಡ ಹಾನಿಗೊಳಗಾಗಿದೆ. ಘಟನೆಯಲ್ಲಿ 24 ಪ್ರಯಾಣಿಕರು ಗಾಯಗೊಂಡಿದ್ದಾರೆ.

ಬ್ಲ್ಯಾಕ್‌ಬಾಕ್ಸ್ ವಶಕ್ಕೆ ಘಟನೆಯ ನಿಖರ ಕಾರಣವೇನು ಹಾಗೂ ಪೈಲಟ್‌ನ ಸ್ಥಿತಿ ವಿಮಾನದ ನಿಯಂತ್ರಣದ ಮೇಲೆ ಯಾವುದೇ ಪರಿಣಾಮ ಬೀರಿತೇ ಎಂಬುದನ್ನು ಪರಿಶೀಲಿಸಲು ಕಾಕ್‌ಪಿಟ್ ವಾಯ್ಸ್ ರೆಕಾರ್ಡರ್ (ಸಿವಿಆರ್) ಮತ್ತು ಫ್ಲೈಟ್ ಡೇಟಾ ರೆಕಾರ್ಡರ್ (ಎಫ್‌ಡಿಆರ್) ಗಳನ್ನು ವಶಕ್ಕೆ ಪಡೆದು ವಿಶ್ಲೇಷಿಸಲಾಗುತ್ತಿದೆ.

# ಜಮ್ಮು ಮತ್ತು ಕಾಶ್ಮೀರದ ಬುಡ್ಗಾಮ್ ಜಿಲ್ಲೆಯ ಅರಣ್ಯದಲ್ಲಿ ಉಗ್ರನ ಹತ್ಯೆ



ಅ.ಶ. ಸುದ್ದಿ ಶ್ರೀನಗರ

**ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಬುಡ್ಗಾಮ್ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಭಾರತೀಯ ಸೇನೆ ಹಾಗೂ ಜಮ್ಮು–ಕಾಶ್ಮೀರ ಪೊಲೀಸರು ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಓರ್ವ ಭಯೋತ್ಪಾದಕ ಹತನಾಗಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪುಲ್ವಾಮಾ ಜಿಲ್ಲೆಯ ಪಖೇರ್‌ಪೋರಾದಿಂದ ಬುಡ್ಗಾಮ್‌ನ ಯೂಸ್‌ಮಾರ್ಗ್ ಕಡೆಗೆ ಶಂಕಿತ ಭಯೋತ್ಪಾದಕರ ಗುಂಪು ತೆರಳುತ್ತಿರುವ ಕುರಿತು ದೊರೆತ ಖಚಿತ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಲಾಯಿತು.**

ಶ್ರೀನಗರ ಮೂಲದ ಚಿನಾರ್ ಕಾರ್ಪ್ಸ್ 'ಎಕ್ಸ್'ನಲ್ಲಿ ಈ ಕುರಿತು ಮಾಹಿತಿ ಹಂಚಿಕೊಂಡಿದ್ದು, ನಿರ್ದಿಷ್ಟ ಗುಪ್ತಚರ ಮಾಹಿತಿಯ ಮೇರೆಗೆ ಭಾರತೀಯ ಸೇನೆ, ಜಮ್ಮು–ಕಾಶ್ಮೀರ ಪೊಲೀಸರು ಹಾಗೂ ಸಿಆರ್‌ಪಿಎಫ್ ಜಂಟಿಯಾಗಿ ಬುಡ್ಗಾಮ್‌ನ ಅಶ್ದರ್ ಗಾಲಿಯಲ್ಲಿ ಶೋಧ ಕಾರ್ಯಾಚರಣೆ ಆರಂಭಿಸಿದ್ದವು ಎಂದು ತಿಳಿಸಿದೆ. ಕಾರ್ಯಾಚರಣೆ ವೇಳೆ ಅನುಮಾನಾಸ್ಪದ ಚಟುವಟಿಕೆ ಗಮನಿಸಿದ ಭದ್ರತಾ ಪಡೆಗಳು ಪ್ರದೇಶವನ್ನು ಸುತ್ತುವರಿದಾಗ, ಭಯೋತ್ಪಾದಕರು ಗುಂಡಿನ ದಾಳಿ ನಡೆಸಿದ್ದಾರೆ. ಇದಕ್ಕೆ ಪ್ರತಿಯಾಗಿ ಪಡೆಗಳು ನಡೆಸಿದ ಕಾರ್ಯಾಚರಣೆಯಲ್ಲಿ ನಡೆದ ಗುಂಡಿನ ಚಕಮಕಿಯಲ್ಲಿ ಓರ್ವ ಭಯೋತ್ಪಾದಕ ಹತನಾಗಿದ್ದಾನೆ. ಸ್ಥಳದಿಂದ ಒಂದು ಎಕೆ ರೈಫಲ್ ವಶಪಡಿಸಿಕೊಳ್ಳಲಾಗಿದೆ.

ಈ ಪ್ರದೇಶದಲ್ಲಿ ಮತ್ತೊಬ್ಬ ಭಯೋತ್ಪಾದಕ ಅಡಗಿಕೊಂಡಿರುವ ಶಂಕೆ ಹಿನ್ನೆಲೆಯಲ್ಲಿ ಶೋಧ ಕಾರ್ಯಾಚರಣೆ ಮುಂದುವರಿದಿದೆ. ಹತನಾದ ಭಯೋತ್ಪಾದಕನ ಗುರುತು ಇನ್ನೂ ಪತ್ತೆಯಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಣಿವೆಯಲ್ಲಿ ಹಲವು ತಿಂಗಳುಗಳಿಂದ ಯಾವುದೇ ಪ್ರಮುಖ ಭಯೋತ್ಪಾದಕ ಚಟುವಟಿಕೆ ವರದಿಯಾಗಿರಲಿಲ್ಲ. ಇದೀಗ ನಡೆದಿರುವ ಈ ಕಾರ್ಯಾಚರಣೆಯ ಹಿನ್ನೆಲೆಯಲ್ಲಿ ಭದ್ರತಾ ಪಡೆಗಳು ಪ್ರದೇಶದಲ್ಲಿ ಕಟ್ಟೆಚ್ಚರ ವಹಿಸಿವೆ.

# ಸಹಸ್ರಾರು ಭಕ್ತರಿಂದ ಅದ್ದೂರಿ ಆಚರಣೆ ಜೈ ಶ್ರೀರಾಮ್ ಘೋಷಣೆ ಮೊಳಗಿದ ವಾತಾವರಣ.

ಅ.ಶ. ಸುದ್ದಿ ಕನಕಗಿರಿ

**ಕನಕಗಿರಿ: ಪಟ್ಟಣದ ಹೊರ ವಲಯದಲ್ಲಿರುವ, ಇಷ್ಟ ದೇವರಾದ ಶ್ರೀ ತೊಂಡಿತೇವರಪ್ಪ ಸ್ವಾಮಿ, ಕಂಠೀರಂಗನ ರಥೋತ್ಸವವು ಪ್ರತಿವರ್ಷದಂತೆ ಈ ವರ್ಷವೂ ಕೂಡ ಶ್ರದ್ಧಾ–ಭಕ್ತಿಯಿಂದ ಹಾಗೂ ಅತ್ಯಂತ ವೈಭವದಿಂದ ಜರುಗಿತು.**

ಬೆಳಗ್ಗೆಯಿಂದಲೇ ದೇವಸ್ಥಾನದಲ್ಲಿ ಸ್ವಾಮಿಗೆ ವಿಶೇಷ ಪೂಜೆ, ಅಭಿಷೇಕ ಹಾಗೂ ಅಲಂಕಾರ ನೆರವೇರಿಸಲಾಯಿತು. ಬಳಿಕ ದೇವಸ್ಥಾನದ ಕಮಿಟಿ ವತಿಯಿಂದ ಆಗಮಿಸಿದ ಭಕ್ತರಿಗೆ



ಅನ್ನಸಂತರ್ಪಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ರಥೋತ್ಸವದಲ್ಲಿ ಕನಕಗಿರಿ ಸೇರಿದಂತೆ ಸುತ್ತಮುತ್ತಲಿನ ಹಲವು ಗ್ರಾಮಗಳಿಂದ ಆಗಮಿಸಿದ ಸಹಸ್ರಾರು ಭಕ್ತರು ಪಾಲ್ಗೊಂಡಿದ್ದರು. ಸಾಂಪ್ರದಾಯಿಕ ಸಂಭ್ರಮದೊಂದಿಗೆ ರಥವನ್ನು ಎಳೆಯುವ ಸಂದರ್ಭದಲ್ಲಿ ಭಕ್ತರಿಂದ ಮೊಳಗಿದ "ಜೈ ಶ್ರೀ ರಾಮ್ ಜೈ ಶ್ರೀ ರಾಮ್?" ಘೋಷಣೆ ಇಡೀ ವಾತಾವರಣದಲ್ಲಿ ಭಕ್ತಿಯ ಉಮ್ಮಸ್ಸು ಇಮ್ಮಡಿಸಿತು. ಭಕ್ತರು ಭಕ್ತಿ, ಭಾವದಿಂದ ರಥೋತ್ಸವದಲ್ಲಿ ಪಾಲ್ಗೊಂಡು ಶ್ರೀ ತೊಂಡಿತೇವರಪ್ಪ ಸ್ವಾಮಿಯ ದರ್ಶನ ಪಡೆದು ಪುನೀತರಾದರು. ಈ ಬಾರಿಯ ರಥೋತ್ಸವವು ಗತವೈಭವವನ್ನು ಮರುಕಳಿಸುವಂತೆ ಅದ್ದೂರಿಯಾಗಿ ಜರುಗಿತು.

# ಸರ್ವ ನಾಗರಿಕರು ಉಚಿತ ಆರೋಗ್ಯ ಶಿಬಿರದ ಸದುಪಯೋಗ ಪಡೆಯಲು ಮನವಿ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ ಜಿಲ್ಲೆಯ ಕುಕನೂರ ಪಟ್ಟಣದಲ್ಲಿ ನಡೆಯುತ್ತಿರುವ ಮುಂಡರಗಿ ಶ್ರೀ ಅನ್ನದಾನೀಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ದಿನಾಂಕ 05/09/2026 ಶನಿವಾರದಂದು ಶ್ರೀ ಅನ್ನದಾನೀಶ್ವರ ಮಠ ಕುಕನೂರಿನಲ್ಲಿ ಗೋರ ಸೇನಾ,**

ಗೋರ ಸಿಕವಾಡಿ ಕುಕನೂರ–ಯಲಬುರ್ಗಾ ತಾಲೂಕ ಘಟಕ ಹಾಗೂ ಸಪ್ತಗಿರಿ ಆಸ್ಪತ್ರೆ ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಬೃಹತ್ ಉಚಿತ ಆರೋಗ್ಯ ಶಿಬಿರ ನಡೆಯಲಿದ್ದು ಸಮಸ್ತ ನಾಗರಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಗೋರ ಸೇನಾ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಸಾಮಾಜಿಕ ಹೋರಾಟಗಾರರಾದ ಶ್ರೀ ಸುರೇಶ ಬಳೂಟಗಿ ಮನವಿ ಮಾಡಿದ್ದಾರೆ.




ಅಂದು ಬೆಳಿಗ್ಗೆ 10 ಗಂಟೆಗೆ ಪೂಜ್ಯ ಶ್ರೀ ಮಹಾದೇವ ದೇವರು ಅವರಿಂದ ಈ ಕಾರ್ಯಕ್ರಮ ಉದ್ಘಾಟನೆಯಾಗಲಿದ್ದು,

ಸಪ್ತಗಿರಿ ಆಸ್ಪತ್ರೆ ಬೆಂಗಳೂರು ಇವರ ನುರಿತ ವೈದ್ಯರಿಂದ ಹೃದಯ ಸಂಬಂಧಿ ಕಾಯಿಲೆ,ಮೂತ್ರಪಿಂಡ ಸಮಸ್ಯೆ, ನರರೋಗ ಹಾಗೂ ಇನ್ನಿತರ ಸಾಮಾನ್ಯ ಕಾಯಿಲೆಗಳಿಗೆ ತಪಾಸಣೆ ನಡೆಸಿ, ಅಗತ್ಯ ಇದ್ದರೆ ಹೆಚ್ಚಿನ ಚಿಕಿತ್ಸೆ ಪಡೆಯಲು ಬೆಂಗಳೂರು ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ನೀಡಲಾಗುವುದು. ಈ ಶಿಬಿರದಲ್ಲಿ ಉಚಿತವಾಗಿ ಬಿಪಿ, ಇ ಸಿ ಜಿ, ಇಕೋ ಸ್ಕ್ಯಾನಿಂಗ್ ಮಾಡಲಾಗುವದು. ಹೆಚ್ಚಿನ ಚಿಕಿತ್ಸೆಗೆ ಆಯ್ಕೆಯಾದವರಿಗೆ ಸಪ್ತಗಿರಿ ಆಸ್ಪತ್ರೆಗೆ ಹೋಗಲು ಉಚಿತವಾಗಿ ಬಸ್ ವ್ಯವಸ್ಥೆ ಇರುತ್ತದೆ. ಶಿಬಿರಕ್ಕೆ ಬರುವಾಗ ಕಡ್ಡಾಯವಾಗಿ ಆಧಾರ್ ಕಾರ್ಡ್ ಮತ್ತು ರೇಷನ್ ಕಾರ್ಡ್ ತರಬೇಕು ಎಂದು ಹೇಳಿದರು.

# ಜನರ ಅಹವಾಲು ಸ್ವೀಕಾರ, ಫಲಾನುಭವಿಗಳಿಗೆ ಸೌಲಭ್ಯ, ಸವಲತ್ತು ವಿತರಣೆ, ವಿವಿಧ ಕಾರ್ಯಕ್ರಮ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಸಾರ್ವಜನಿಕರ ಸಮಸ್ಯೆಗಳನ್ನು ಸ್ಥಳದಲ್ಲಿಯೇ ಆಲಿಸಿ, ಸರ್ಕಾರದ ವಿವಿಧ ಯೋಜನೆಗಳು ಹಾಗೂ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವ ಉದ್ದೇಶದಿಂದ ಪ್ರಜಾಸೇವಾ ಇಲಾಖೆ ಹಾಗೂ ಜಿಲ್ಲಾಡಳಿತ ಕೊಪ್ಪಳ ವತಿಯಿಂದ ಪ್ರಜಾಸೇವಾ ಆಂದೋಲನ ಸಭೆಯು ಸೆಪ್ಟೆಂಬರ್ 05ರಂದು ಜಿಲ್ಲೆಯಲ್ಲಿ ನಡೆಯಿತು. ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಚಿಕ್ಕವಂಕಲಕುಂಟಾ ಗ್ರಾಮದ ಬುದ್ಧ ಬಸವ ಅಂಬೇಡ್ಕರ್ ಭವನದಲ್ಲಿ ನಡೆದ ಪ್ರಜಾಸೇವಾ ಆಂದೋಲನ ಸಭೆಗೆ ಸಮಾಜ ಕಲ್ಯಾಣ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಕೆ.ಪಿ. ಮೋಹನರಾಜ್ ಅವರು ಚಾಲನೆ ನೀಡಿದರು.**

ಕೊಪ್ಪಳ ಜಿಲ್ಲಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ ಅವರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಾರ್ವಜನಿಕರು ತಮ್ಮ ಕುಂದುಕೊರತೆಗಳ ದೂರು ಅರ್ಜಿ ಸಲ್ಲಿಸಿದ್ದು, ಒಟ್ಟು 281 ಅರ್ಜಿಗಳು ಸ್ವೀಕೃತವಾದವು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಹಾಗೂ ಜಿಲ್ಲಾಧಿಕಾರಿಗಳು ಇತರೆ ಅಧಿಕಾರಿಗಳು ಜನರ ಅಹವಾಲುಗಳನ್ನು ಆಲಿಸಿದರು.

'ಬಸವ ವಸತಿ ಹೆಚ್ಚುವರಿ ಯೋಜನೆ' ಮಂಜೂರಾತಿ ಆದೇಶ ವಿತರಣೆ: ಪ್ರಜಾ ಸೇವಾ ಆಂದೋಲನಾ ಸಭೆಯ ಅಂಗವಾಗಿ, ಹಿರೇವಂಕಲಕುಂಟಾ ಗ್ರಾಮ ಪಂಚಾಯತಿ ವ್ಯಾಪ್ತಿಯ ಚಿಕ್ಕವಂಕಲಕುಂಟಾ ಹಾಗೂ ಉಚ್ಚಲಕುಂಟಾ ಗ್ರಾಮಗಳ ಒಟ್ಟು ಐವರು ಮಹಿಳಾ ಫಲಾನುಭವಿಗಳಿಗೆ 2024–25ನೇ ಸಾಲಿನ 'ಬಸವ ವಸತಿ ಹೆಚ್ಚುವರಿ ಯೋಜನೆ'ಯಡಿ ಮನೆ ಮಂಜೂರಾತಿ ಆದೇಶ ಪತ್ರಗಳನ್ನು ವಿತರಿಸಲಾಯಿತು.

ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕೆ ಪ್ರೋತ್ಸಾಹಧನ: ಕೊಪ್ಪಳ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಯೋಜನೆಯಡಿ ಯಲಬುರ್ಗಾ ತಾಲೂಕಿನ ಹಿರೇವಂಕಲಕುಂಟಾ ಗ್ರಾಮ ಪಂಚಾಯಿತಿಗೆ ಸೇರಿದ ಚಿಕ್ಕವಂಕಲಕುಂಟಾ ಗ್ರಾಮದ ಐವರು ಅರ್ಹ ಫಲಾನುಭವಿಗಳಿಗೆ ವೈಯಕ್ತಿಕ ಗೃಹ ಶೌಚಾಲಯ ನಿರ್ಮಾಣಕ್ಕಾಗಿ ಅಧಿಕೃತ ಕಾರ್ಯಾದೇಶ ವಿತರಿಸಲಾಗಿದ್ದು, ಪರಿಶಿಷ್ಟ ಪಂಗಡ ವರ್ಗಕ್ಕೆ ಸೇರಿದ ಫಲಾನುಭವಿಗಳಿಗೆ ಈ ಸೌಲಭ್ಯ ದೊರೆತಿದ್ದು, ಪ್ರತಿಯೊಬ್ಬರಿಗೂ ರೂ. 15,000 ಪ್ರೋತ್ಸಾಹಧನ ನಿಗದಿಪಡಿಸಲಾಗಿದೆ.

ಜಾಬ್ ಕಾರ್ಡ್ ವಿತರಣೆ: ಕೊಪ್ಪಳ ಜಿಲ್ಲಾ ಪಂಚಾಯತ್ ಹಾಗೂ ಯಲಬುರ್ಗಾ ತಾಲೂಕು ಪಂಚಾಯತ್ ವತಿಯಿಂದ ಹಿರೇವಂಕಲಕುಂಟಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಿಕ್ಕವಂಕಲಕುಂಟಾ ಗ್ರಾಮದ ಅರ್ಹ ಐವರು ಮಹಿಳಾ ಫಲಾನುಭವಿಗಳಿಗೆ ಉದ್ಯೋಗ ಭರವಸೆ ನೀಡುವ ಜಾಬ್ ಕಾರ್ಡ್‌ಗಳನ್ನು ಇದೇ ವೇಳೆ ವಿತರಿಸಲಾಯಿತು.



ಅನ್ನಪ್ರಾಶನ ಹಾಗೂ ಸೀಮಂತ ಕಾರ್ಯಕ್ರಮ ಆಯೋಜನೆ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ (ಸಿಡಿಪಿಒ) ವತಿಯಿಂದ ಗ್ರಾಮದಲ್ಲಿ 'ಪ್ರಜಾ ಸೇವಾ ಆಂದೋಲನ'ದ ಅಂಗವಾಗಿ ಅನ್ನಪ್ರಾಶನ ಹಾಗೂ ಗರ್ಭಿಣಿಯರಿಗೆ ಸೀಮಂತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಗ್ರಾಮದ ಪುಟಾಣಿ ಮಕ್ಕಳಿಗೆ ಅನ್ನಪ್ರಾಶನ ನೆರವೇರಿಸುವ ಜತೆಗೆ ಗರ್ಭಿಣಿಯರಿಗೆ ಸಾಂಪ್ರದಾಯಿಕವಾಗಿ ಸೀಮಂತ ಕಾರ್ಯಕ್ರಮವನ್ನು ನೆರವೇರಿಸಿ ಪೌಷ್ಟಿಕ ಆಹಾರ ಮತ್ತು ಆರೋಗ್ಯ ರಕ್ಷಣೆಯ ಕುರಿತು ಜಾಗೃತಿ ಮೂಡಿಸಲಾಯಿತು.

ಹೆಣ್ಣು ಮಕ್ಕಳಿಗೆ ಸುಕನ್ಯಾ ಸಮೃದ್ಧಿ ಪಾಸ್ ಪುಸ್ತಕ ವಿತರಣೆ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಭಾಗ್ಯಲಕ್ಷ್ಮಿ ಯೋಜನೆಯಡಿ ಅರ್ಹ ಫಲಾನುಭವಿ ಹೆಣ್ಣು ಮಕ್ಕಳಿಗೆ 'ಸುಕನ್ಯಾ ಸಮೃದ್ಧಿ ಯೋಜನೆ'ಯ ಪಾಸ್ ಪುಸ್ತಕಗಳನ್ನು ವಿತರಿಸಲಾಗಿದ್ದು, ಹಿರೇವಂಕಲಕುಂಟಾ ಮೇಲ್ವಿಚಾರಕರ ವ್ಯಾಪ್ತಿಯ ವಿವಿಧ ಅಂಗನವಾಡಿ ಕೇಂದ್ರಗಳ ಒಟ್ಟು 11 ಅರ್ಹ ಹೆಣ್ಣು ಮಕ್ಕಳಿಗೆ ಈ ಯೋಜನೆಯ ಸೌಲಭ್ಯವನ್ನು ಈ ಪ್ರಜಾಸೇವಾ ಆಂದೋಲನದ ಮೂಲಕ ತಲುಪಿಸಲಾಯಿತು.

ರೈತರಿಗೆ ವಿವಿಧ ಕೃಷಿ ಸಲಕರಣೆಗಳ ವಿತರಣೆ: ರೈತರ ಕೃಷಿ ಚಟುವಟಿಕೆಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಸೂಕ್ಷ್ಮ ನೀರಾವರಿ ಹಾಗೂ ಕೃಷಿ ಯಾಂತ್ರೀಕರಣ ಯೋಜನೆಗಳಡಿ ಆಯ್ಕೆಯಾದ ಅರ್ಹ ರೈತ ಫಲಾನುಭವಿಗಳಿಗೆ ಯಲಬುರ್ಗಾ ತಾಲೂಕು ಕೃಷಿ ಇಲಾಖೆಯ ವತಿಯಿಂದ ಅಗತ್ಯ ಕೃಷಿ ಯಂತ್ರೋಪಕರಣ ಹಾಗೂ ನೀರಾವರಿ ಪರಿಕರಗಳನ್ನು ಕಾರ್ಯಕ್ರಮದಲ್ಲಿ ವಿತರಿಸಲಾಯಿತು.

ತೋಟಗಾರಿಕೆ ಇಲಾಖೆಯ ಕಾರ್ಯಾದೇಶ ವಿತರಣೆ: ಹಿರೇವಂಕಲಕುಂಟ ಹೋಬಳಿಯ ವ್ಯಾಪ್ತಿಗೆ ಒಳಪಡುವ ರೈತರಿಗೆ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಹಾಗೂ ಕೇಂದ್ರ ಪುರಸ್ಕೃತ 'ಸ್ಮಾಮ್' (SMAM) ಯೋಜನೆಗಳಡಿ ಒಟ್ಟು ರೂ. 2,43,906 ಸಹಾಯಧನ ಮಂಜೂರಾಗಿದ್ದು, ಆಯ್ಕೆಯಾದ ಫಲಾನುಭವಿಗಳ ತೋಟಗಾರಿಕೆ ಇಲಾಖೆ ವತಿಯಿಂದ ತಾಂತ್ರಿಕ ಮಂಜೂರಾತಿ ಹಾಗೂ ಕಾರ್ಯಾದೇಶಗಳನ್ನು ಸಹ ವಿತರಿಸಲಾಯಿತು.

ಅರ್ಹ ಫಲಾನುಭವಿಗಳಿಗೆ ಪಿಂಚಣಿ ಮಂಜೂರಾತಿ: ವಿಧವಾ ವೇತನ ಹಾಗೂ ಅಂಗವಿಕಲ ವೇತನ ವಿಭಾಗಗಳಲ್ಲಿ ಅರ್ಜಿ ಸಲ್ಲಿಸಿ ಅನುಮೋದನೆ ಪಡೆದ ವಿವಿಧ ಗ್ರಾಮಗಳ ಅರ್ಹ ಫಲಾನುಭವಿಗಳಿಗೆ ಸಾಮಾಜಿಕ ಭದ್ರತಾ ಯೋಜನೆಯಡಿ ಪಿಂಚಣಿ ಸೌಲಭ್ಯವನ್ನು ಕಂದಾಯ ಇಲಾಖೆಯ ವತಿಯಿಂದ ಇದೇ ವೇಳೆ ವಿತರಣೆ ಮಾಡಲಾಯಿತು.

ಇದಲ್ಲದೆ ಹಿರೇವಂಕಲಕುಂಟಾದ ದೀಪಾ ಸಂಜೀವಿನಿ ಮಹಿಳಾ ಸ್ವ–ಸಹಾಯ ಸಂಘ ಹಾಗೂ ಚಿಕ್ಕವಂಕಲಕುಂಟಾದ ಕಾಮಧೇನು ಸಂಜೀವಿನಿ ಸ್ವ–ಸಹಾಯ ಸಂಘಗಳಿಗೆ ಸಹಾಯಧನ ಚೆಕ್ಕುಗಳನ್ನು ಕಾರ್ಯಕ್ರಮದಲ್ಲಿ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ವರ್ಣಿತ್ ನೇಗಿ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾದ ನಿರ್ಮಾಲ, ಸಹಾಯಕ ಆಯುಕ್ತರಾದ ಮಹೇಬೂಬ್ ಜೀಲಾನಿ, ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕರಾದ ಶಾಮಸುಂದರ ಕಾಂಬ್ಳೆ, ಜಂಟಿ ಕೃಷಿ ನಿರ್ದೇಶಕರಾದ ಜಿಡಿ ಕೃಷ್ಣಮೂರ್ತಿ, ತೋಟಗಾರಿಕೆ ಜಂಟಿ ನಿರ್ದೇಶಕರಾದ ಕೃಷ್ಣ ಸಿ. ಉಕ್ಕುಂದ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಮಂಜುನಾಥ ಗುಂಡೂರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ. ಈಶ್ವರ ಸವಡಿ, ತಹಶೀಲ್ದಾರ ಪ್ರಕಾಶ ನಾಸಿ, ತಾ.ಪಂ ಇಓ ನೀಲಗಂಗಾ ಬಬಲಾದ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು, ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕರು, ಇತರೆ ಜನಪ್ರತಿನಿಧಿಗಳು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಸದೃಢ ದೇಹದಲ್ಲಿ ಮಾತ್ರ ಸದೃಢ ಮನಸ್ಸು" ಹನಮಗೌಡ ಪೊಲೀಸ್ ಪಾಟೀಲ್

ಅ.ಶ. ಸುದ್ದಿ ಕನಕಗಿರಿ

**ಕುಕನೂರು: ತಾಲೂಕಿನ ಕುದರಿಮೋತಿ ಗ್ರಾಮದಲ್ಲಿ ಕುದರಿಮೋತಿ?ಮಂಗಳೂರು ವಲಯ ಮಟ್ಟದ ಪ್ರಾಥಮಿಕ ಶಾಲೆಗಳ ಕ್ರೀಡಾಕೂಟಕ್ಕೆ ಗುರು-ಹಿರಿಯರು ಹಾಗೂ ಯುವಕರು ಕ್ರೀಡಾ ಜ್ಯೋತಿ ಬೆಳಗಿಸುವ ಮೂಲಕ ಅದ್ದೂರಿ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ದಳಪತಿ ಹನಮಗೌಡ ಪೊಲೀಸ್ ಪಾಟೀಲ್, ಕ್ರೀಡೆಯಲ್ಲಿ ಸೋಲು-ಗೆಲುವು ಸಹಜವಾಗಿದ್ದು, ವಿದ್ಯಾರ್ಥಿಗಳು ಎರಡನ್ನೂ ಸಮಾನವಾಗಿ ಸ್ವೀಕರಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.**

"ಕ್ರೀಡೆ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಸದೃಢಗೊಳಿಸುತ್ತದೆ. ಸದೃಢ ದೇಹದಲ್ಲಿ ಮಾತ್ರ ಸದೃಢ ಮನಸ್ಸು ಇರಲು ಸಾಧ್ಯ. ಕ್ರೀಡೆ ಇಲ್ಲದ ಜೀವನ ಕೀಟ ತಿಂದ ಹಣ್ಣಿನಂತಾಗುತ್ತದೆ.



ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಕ್ರೀಡೆಗೂ ಹೆಚ್ಚಿನ ಆದ್ಯತೆ ನೀಡಬೇಕು," ಎಂದು ಸಲಹೆ ನೀಡಿದರು. ನಂತರ ಮಾತನಾಡಿದ ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಫರೀದಾ ಬೇಗಂ ತಂಬಾಕದರ್, ಕ್ರೀಡೆ ವಿದ್ಯಾರ್ಥಿಗಳಲ್ಲಿ ಶಿಸ್ತು, ಆತ್ಮವಿಶ್ವಾಸ, ನಾಯಕತ್ವ ಗುಣ ಹಾಗೂ ಸ್ಪರ್ಧಾತ್ಮಕ ಮನೋಭಾವ ಬೆಳೆಸುತ್ತದೆ. ಪ್ರಾಥಮಿಕ ಶಾಲಾ ಹಂತದಲ್ಲಿಯೇ ಮಕ್ಕಳಲ್ಲಿ ಕ್ರೀಡಾ ಆಸಕ್ತಿ ಬೆಳೆಸುವುದು ಅಗತ್ಯವಾಗಿದ್ದು, ಕ್ರೀಡಾಕೂಟದಲ್ಲಿ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಬೇಕು ಎಂದು ಹೇಳಿದರು.

ಎಸ್‌ಡಿಎಂಸಿ ಅಧ್ಯಕ್ಷ ಉಮೇಶ ಯಂಕಣ್ಣ ದಾಸರ್ ಮಾತನಾಡಿ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಲ್ಲಿಯೂ ಅಪಾರ ಕ್ರೀಡಾ ಪ್ರತಿಭೆ ಅಡಗಿದೆ. ಇಂತಹ ವಲಯ ಮಟ್ಟದ ಕ್ರೀಡಾಕೂಟಗಳು ಮಕ್ಕಳ ಪ್ರತಿಭೆಯನ್ನು ಗುರುತಿಸಿ, ಅವರಿಗೆ ಮುಂದಿನ ಹಂತದಲ್ಲಿ ಉತ್ತಮ ಅವಕಾಶಗಳನ್ನು ಕಲ್ಪಿಸಲು ಸಹಕಾರಿಯಾಗುತ್ತವೆ. ವಿದ್ಯಾರ್ಥಿಗಳು ಕ್ರೀಡಾ ಮನೋಭಾವದಿಂದ ಸ್ಪರ್ಧಿಸಿ, ಸೋಲು-ಗೆಲುವಿಗಿಂತ ಭಾಗವಹಿಸುವಿಕೆ ಹಾಗೂ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸುವುದಕ್ಕೆ ಆದ್ಯತೆ ನೀಡಬೇಕು. ಕ್ರೀಡೆಯ ಮೂಲಕ ಉತ್ತಮ ಆರೋಗ್ಯದ ಜೊತೆಗೆ ಶಿಸ್ತು, ಸಮಯಪಾಲನೆ, ಒಗ್ಗಟ್ಟು ಹಾಗೂ ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಂಜುನಾಥ ಗಟ್ಟೆಪ್ಪನವರ, ವಿಜಯಕುಮಾರ್ ದಾಸರ್. ಪಂಪಾಪತಿ ವಣಗೇರಿ, ಮಾಜಿ ಗ್ರಾಮ ಪಂಚಾಯತಿ ಉಪಾಧ್ಯಕ್ಷ ದ್ಯಾಮಣ್ಣ ಉಚ್ಚಕುಂಟಿ, ಚೈತನ್ಯ. ದೇವಪ್ಪ ಕಾಳಿ, ಮರಿಯಪ್ಪ ಕೆಂಗಾರ್, ದುರಗಪ್ಪ ಕಾಳಿ, ಸರ್ಕಾರಿ ಪ್ರೌಢ ಶಾಲೆಯ ಎಸ್.ಡಿ.ಎಮ್ಸಿ ಅಧ್ಯಕ್ಷ ಈಶಪ್ಪ ವಣಗೇರಿ, ಮಾಜಿ ಗ್ರಾಮ ಪಂಚಾಯಿತಿ ಸದಸ್ಯರಾದ ಲಕ್ಷ್ಮೀ ಗವಿಸಿದ್ದಪ್ಪ ದೊಡ್ಡಮನಿ, ಮಾಜಿ ಗ್ರಾ.ಪಂ. ಉಪಾಧ್ಯಕ್ಷ ಲಕ್ಷ್ಮೀ ವಿಜಯಕುಮಾರ್ ದಾಸರ್, ಹನುಮಂತ ಚಿತ್ರಗಾರ್,ಕಾರ್ಯಕ್ರಮದ ನಿರೂಪಣೆ ಮಂಗಳೇಶ ಯಲಿಗಾರ್,ಮುತ್ತುಕಾಳಿ, ಸೇರಿದಂತೆ ಶಿಕ್ಷಕರು, ಗ್ರಾಮಸ್ಥರು, ವಿದ್ಯಾರ್ಥಿಗಳು ಹಾಗೂ ಕ್ರೀಡಾಪಟುಗಳು ಉಪಸ್ಥಿತರಿದ್ದರು.

## ಸೆ.6 ರಿಂದ 13 ರವರೆಗೆ ತಾಲ್ಲೂಕು ಮಟ್ಟದ ದಸರಾ ಕ್ರೀಡಾಕೂಟ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ 2026-27ನೇ ಸಾಲಿನ ದಸರಾ ಕ್ರೀಡಾಕೂಟಗಳನ್ನು ಪುರುಷ ಹಾಗೂ ಮಹಿಳಾ ಕ್ರೀಡಾಪಟುಗಳಿಗಾಗಿ ತಾಲೂಕು, ಜಿಲಾ,?ಲ ವಿಭಾಗ ಹಾಗೂ ರಾಜ್ಯ ಮಟ್ಟಗಳಲ್ಲಿ ಆಯೋಜಿಸಲು ನಿರ್ಧರಿಸಲಾಗಿದೆ. ಅದರಂತೆ ಕೊಪ್ಪಳ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ತಾಲೂಕು ಮಟ್ಟದ ದಸರಾ ಕ್ರೀಡಾಕೂಟಗಳನ್ನು ಸೆಪ್ಟೆಂಬರ್ 6 ರಿಂದ 13 ರವರೆಗೆ ವಿವಿಧ ತಾಲ್ಲೂಕುಗಳಲ್ಲಿ ಹಮ್ಮಿಕೊಳ್ಳಲಾಗಿದೆ.**

ಸೆಪ್ಟೆಂಬರ್ 6 ರಂದು ಆಯೋಜಕರಾದ ಈಶಪ್ಪ ಗಾಜಿ, ದೈಹಿಕ ಶಿಕ್ಷಕರು (ಮೊ.ಸಂ. 9535831941) ಇವರ ನೇತೃತ್ವದಲ್ಲಿ ಕಾರಟಗಿಯ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ, ಸೆಪ್ಟೆಂಬರ್ 8 ರಂದು ತಿಪ್ಪಣ್ಣ ಹಿರೇಖೇಡ, ದೈಹಿಕ ಶಿಕ್ಷಕರು (ಮೊ.ಸಂ. 9008867656) ಇವರ ನೇತೃತ್ವದಲ್ಲಿ ಕನಕಗಿರಿಯ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ, ಸೆಪ್ಟೆಂಬರ್ 10 ರಂದು ಕೊಪ್ಪಳ ತಾಲ್ಲೂಕು ಕ್ರೀಡಾಧಿಕಾರಿ ಶರಣಬಸವ ಬಂಡಿಹಾಳ್ (ಮೊ.ಸಂ. 9591292420) ಇವರ ನೇತೃತ್ವದಲ್ಲಿ ಜಿಲ್ಲಾ ಕ್ರೀಡಾಂಗಣ, ಕೊಪ್ಪಳದಲ್ಲಿ, ಸೆಪ್ಟೆಂಬರ್ 11 ರಂದು ಶಿವರಾಜ ಚಲುವಾದಿ, ದೈಹಿಕ ಶಿಕ್ಷಕರು (ಮೊ.ಸಂ. 9743462276) ಇವರ ನೇತೃತ್ವದಲ್ಲಿ ತಾಲ್ಲೂಕು ಕ್ರೀಡಾಂಗಣ ಕುಷ್ಟಗಿಯಲ್ಲಿ, ಸೆಪ್ಟೆಂಬರ್ 12 ರಂದು ದ್ಯಾಮಣ್ಣ ಗೊಂದಿ, (ಮೊ.ಸಂ. 9741742731) ಇವರ ನೇತೃತ್ವದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ, ತಾಲ್ಲೂಕು ಕ್ರೀಡಾಂಗಣ ಯಲಬುರ್ಗಾದಲ್ಲಿ, ಸೆಪ್ಟೆಂಬರ್ 12 ರಂದು ಈಶಪ್ಪ ಗಾಜಿ, ದೈಹಿಕ ಶಿಕ್ಷಕರು (ಮೊ.ಸಂ. 9535831941) ಇವರ ನೇತೃತ್ವದಲ್ಲಿ ಗಂಗಾವತಿ ತಾಲ್ಲೂಕು ಕ್ರೀಡಾಂಗಣದಲ್ಲಿ, ಸೆಪ್ಟೆಂಬರ್ 13 ರಂದು ವಿನಾಯಕ ಭಸಲಾಪೂರ, (ಮೊ.ಸಂ. 9071841825) ಇವರ ನೇತೃತ್ವದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ, ತಾಲ್ಲೂಕು ಕ್ರೀಡಾಂಗಣ ಯಲಬುರ್ಗಾದಲ್ಲಿ ತಾಲ್ಲೂಕು ಮಟ್ಟದ ಕ್ರೀಡಾಕೂಟಗಳು ಜರುಗಲಿವೆ. 2026-27 ನೇ ಸಾಲಿನ ಕೊಪ್ಪಳ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟಗಳನ್ನು ಸೆಪ್ಟೆಂಬರ್ 18 ಮತ್ತು 19 ರಂದು ಕೊಪ್ಪಳದ ಜಿಲ್ಲಾ ಕ್ರೀಡಾಂಗಣದಲ್ಲಿ ಸಂಘಟಿಸಲಾಗಿದೆ ಎಂದು ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸ್ವಯಂಘೋಷಿತ ಅಧ್ಯಕ್ಷ ಬಂಗ್ಲೆ ಮಲ್ಲಿಕಾರ್ಜುನ್ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಆಗ್ರಹ

ಅ.ಶ. ಸುದ್ದಿ ಕನಕಗಿರಿ

**ಕನಕಗಿರಿ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘದ ಹೆಸರಿನಲ್ಲಿ ಸ್ವಯಂಘೋಷಿತ ಅಧ್ಯಕ್ಷರಾಗಿ ಗುರುತಿಸಿಕೊಂಡಿರುವ ಬಂಗ್ಲೆ ಮಲ್ಲಿಕಾರ್ಜುನ್ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ, ಸಂಘದ ಕನಕಗಿರಿ ತಾಲೂಕು ಘಟಕದ ಪದಾಧಿಕಾರಿಗಳು ಶುಕ್ರವಾರ ತಹಶೀಲ್ದಾರ್ ಕಚೇರಿಯ ಮೂಲಕ ಜಿಲ್ಲಾಧಿಕಾ-ರಿಗಳಿಗೆ ಮನವಿ ಸಲ್ಲಿಸಿದರು.**

ಮನವಿಯಲ್ಲಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವು ಸುಮಾರು 95 ವರ್ಷಗಳ ಇತಿಹಾಸ ಹೊಂದಿದ್ದು, ದೇಶದ ಪ್ರಮುಖ ಪತ್ರಕರ್ತರ ಸಂಘಟನೆಗಳಲ್ಲಿ ಒಂದಾಗಿದೆ. ಸಂಘದ ಚುನಾಯಿತ ಅಧ್ಯಕ್ಷರಾದ ಶಿವಾನಂದ ತಗಡೂರ ಅವರ ವಿರುದ್ಧ ಬಂಗ್ಲೆ ಮಲ್ಲಿಕಾರ್ಜುನ್ ಅವರು ಆಧಾರರಹಿತ ಆರೋಪಗಳನ್ನು ಮಾಡುತ್ತಿದ್ದು, ಅವರನ್ನು ಸಂಘಟನೆ ಅಧಿಕೃತವಾಗಿ



ಗುರುತಿಸಿಲ್ಲ ಎಂದು ತಿಳಿಸಲಾಗಿದೆ. ಈ ಹಿಂದೆ ಶಿವಮೊಗ್ಗ ಜಿಲ್ಲೆಯಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ಸಾರ್ವಜನಿಕವಾಗಿ ಕ್ಷಮೆಯಾಚಿಸಿದ್ದರೂ, ಮತ್ತೆ ಪತ್ರಕರ್ತರ ಸಂಘಟನೆಯ ಹೆಸರನ್ನು ಬಳಸಿಕೊಂಡು ಹಣ ವಸೂಲಿ ಹಾಗೂ ಸಂಘಟನೆಗೆ ಧಕ್ಕೆ ತರುವಂತಹ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ ಎಂದು ಮನವಿಯಲ್ಲಿ ಆರೋಪಿಸಲಾಗಿದೆ.

ಅಲ್ಲದೇ, ಸಿರುಗುಪ್ಪ ಪೊಲೀಸ್ ಠಾಣೆಯಲ್ಲಿ ಸರ್ಕಾರಿ ಅಧಿಕಾರಿಗೆ ಬೆದರಿಕೆ ಹಾಕಿದ ಆರೋಪಕ್ಕೆ ಸಂಬಂಧಿಸಿದಂತೆ ಬಂಗ್ರೆ ಮಲ್ಲಿಕಾರ್ಜುನ್ ವಿರುದ್ಧ ಪ್ರಕರಣ ದಾಖಲಾಗಿರುವುದಾಗಿ ಮನವಿಯಲ್ಲಿ ಉಲ್ಲೇಖಿಸಲಾಗಿದ್ದು, ಈ ಹಿನ್ನೆಲೆಯಲ್ಲಿ ಅವರ ವಿರುದ್ಧ ಸಮಗ್ರ ತನಿಖೆ ನಡೆಸಿ, ಪತ್ರಕರ್ತರ ಸಂಘಟನೆ ಹಾಗೂ ಅದರ ಪದಾಧಿಕಾರಿಗಳ ತೇಜೋವಧೆ ಮಾಡುವ ಉದ್ದೇಶಪೂರ್ವಕ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು ಎಂದು ಒತ್ತಾಯಿಸಲಾಗಿದೆ. ಸಂಘದ ಹೆಸರನ್ನು ದುರುಪಯೋಗಪಡಿಸಿಕೊಂಡು ಸಾರ್ವಜನಿಕರಲ್ಲಿ ಗೊಂದಲ ಸೃಷ್ಟಿಸುವ ಹಾಗೂ ಸಂಘದ ಘನತೆಗೆ ಧಕ್ಕೆ ತರುವ ಆರೋಪಗಳ ಕುರಿತು ಕಾನೂನುಬದ್ಧವಾಗಿ ಪರಿಶೀಲಿಸಿ, ತಪ್ಪಿತಸ್ಥರೆಂದು ಕಂಡುಬಂದಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಮನವಿದಾರರು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಕನಕಗಿರಿ ತಾಲೂಕು ಅಧ್ಯಕ್ಷ ಸೋಮಶೇಖರಯ್ಯ ಸ್ವಾಮಿ ಹಿರೇಮಠ , ಉಪಾಧ್ಯಕ್ಷ ಗೌತಮ್ ಯಾದವ, ಮಹಾಂತೇಶ ಕಲಕೇರಿ, ಪ್ರಧಾನ ಕಾರ್ಯದರ್ಶಿ ಪ್ರಲ್ಹಾದ ರೆಡ್ಡಿ, ಸಹ ಕಾರ್ಯದರ್ಶಿ ಹೊನ್ನೂರು ಹುಸೇನ ಬೇಲ್ದಾರ್, ಖಜಾಂಚಿ ಶ್ರೀನಿವಾಸ ಪೂಜಾರ, ಸದಸ್ಯರಾದ ಮಧುಸೂದನ ರೆಡ್ಡಿ, ಶೇಖರಸಿಂಗ್ ರಜಪೂತ, ಶರಣಪ್ಪ, ಅಯ್ಯಪ್ಪ ಕಮ್ಮಾರ ಉಪಸ್ಥಿತರಿದ್ದರು.

## ವಿದ್ಯಾರ್ಥಿಗಳ ಕೃಷ್ಣ-ರಾಧಾ ವೇಷಭೂಷಣ, ಮಣ್ಣಿನ ಮಡಿಕೆ ಒಡೆಯುವ ಆಟಗಳ ಅದ್ದೂರಿ ಪ್ರದರ್ಶನ



ಅ.ಶ. ಸುದ್ದಿ ಕನಕಗಿರಿ

**ಕನಕಗಿರಿ: ಶ್ರೀ ವೆಂಕಟೇಶ್ವರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ಅತ್ಯಂತ ವಿಭಿನ್ನ ರೀತಿಯಲ್ಲಿ ಹಾಗೂ ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಶ್ರೀ ಕೃಷ್ಣನ ಜನ್ಮ ವಿಚಾರಧಾರೆಗಳ ಕುರಿತು ವಿಶೇಷವಾಗಿ ತಿಳಿಸಲಾಯಿತು. ?ಈ ವಿಶೇಷ ಹಬ್ಬದ ಸಂಭ್ರಮದಲ್ಲಿ ಶಾಲೆಯ ಅನೇಕ ವಿದ್ಯಾರ್ಥಿನಿಯರು ಹಾಗೂ ಮುದ್ದು ಮಕ್ಕಳು ಶ್ರೀ ಕೃಷ್ಣ ಮತ್ತು ರಾಧೆ ವೇಶಭೂಷಣಗಳಲ್ಲಿ ಕಂಗೊಳಿಸಿ ಎಲ್ಲರ ಗಮನ ಸೆಳೆದರು.**

ಕಾರ್ಯಕ್ರಮದ ಮುಖ್ಯ ಆಕರ್ಷಣೆಯೆಂದರೆ ಮಣ್ಣಿನ ಮಡಿಕೆ ಒಡೆಯುವ ಕಾರ್ಯಕ್ರಮ. ?ಶ್ರೀ ಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ ಶಾಲೆಯ ಮುದ್ದು ಮಕ್ಕಳಿಗೆ ಆಯೋಜಿಸಲಾಗಿದ್ದ ಮಣ್ಣಿನ ಮಡಿಕೆ ಹೊಡೆಯುವ ಕಾರ್ಯಕ್ರಮ ಅತ್ಯಂತ ವಿಭಿನ್ನವಾಗಿ ಮತ್ತು ಅತ್ಯುತ್ಸಾಹದಿಂದ ಹಾಗೂ ಸಡಗರದಿಂದ ಕೂಡಿತ್ತು. ಶಾಲಾ ಶಿಕ್ಷಕರು ಕೃಷ್ಣನ ವಿಗ್ರಹಕ್ಕೆ ಪೂಜೆ ಸಲ್ಲಿಸಿ ಹಬ್ಬವನ್ನು ಪ್ರಾರಂಭಿಸಿದರು. ಇದರ ನಂತರ, ಶಾಲಾ ಮಕ್ಕಳು ಗೋಪಾಲಕರಾಗಿ ಮಣ್ಣಿನ ಮಡಿಕೆಯನ್ನು ಒಡೆಯುವ ಆಟವನ್ನು ಆಡಿದರು. ನಂತರ ಶಾಲೆಯ ಮುಖ್ಯ ಗುರುಗಳಾದ ನಾಗೇಶ್ ಮಾಟುರ್ ಮಾತನಾಡಿ ಈ ಸುಂದರ ಹಬ್ಬದ ಆಚ-'ರಣೆಯು ವಿದ್ಯಾರ್ಥಿಗಳಲ್ಲಿ ಧಾರ್ಮಿಕ ಸಂಪ್ರದಾಯ ಮತ್ತು ಸಂಸ್ಕೃತಿಯ ಬಗ್ಗೆ ಜಾಗೃತಿಯನ್ನು ಮೂಡಿಸಲು ತುಂಬಾ ಸಹಾಯಕವಾಗಿದೆ ಮತ್ತು ಮಕ್ಕಳಲ್ಲಿ ಕಲ್ಪನಾ ಶಕ್ತಿ ವೃದ್ಧಿಸಲು ಸಹಾಯಕವಾಗಿದೆ ಎಂದರು.

ಈ ಕಾರ್ಯಕ್ರಮದಲ್ಲಿ ಶಾಲೆಯ ಅಧ್ಯಕ್ಷರಾದ ಶ್ರೀ ನೀಲಕಂಠಗೌಡ ಪೊಲೀಸ್ ಪಾಟೀಲ್ ಹಾಗೂ ಶಾಲೆಯ ಮುಖ್ಯ ಗುರುಗಳಾದ ನಾಗೇಶ್ ಮಾಟುರ್, ಶಿಕ್ಷಕರಾದ ಶ್ರೀಮತಿ ಪ್ರಿಯಾಂಕ ರೆಡ್ಡಿ, ಶ್ರೀ ವೆಂಕಟೇಶ್, ಶ್ರೀಮತಿ ರೇಖಾ, ಶ್ರೀಮತಿ ವಿಜಯಲಕ್ಷ್ಮಿ ಉಪಸ್ಥಿತರಿದ್ದರು. ಹಾಗೆಯೇ ಪಾಲಕ ಪೋಷಕರು ಮತ್ತು ಮುದ್ದು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಸಂಭ್ರಮದ ಕಾರ್ಯಕ್ರಮಕ್ಕೆ ಮೆರುಗು ತಂದರು. ಅಲ್ಲದೇ, ತಮ್ಮ

## ಚಡಚಣದಲ್ಲಿ ಸೆ.8ರಂದು ದಸರಾ ಕ್ರೀಡಾಕೂಟ

ಅ.ಶ. ಸುದ್ದಿ ವಿಜಯಪುರ

**ವಿಜಯಪುರ: 2026-27ನೇ ಸಾಲಿನ ತಾಲ್ಲೂಕು ಮಟ್ಟದ ದಸರಾ ಕ್ರೀಡಾಕೂಟದ ಸ್ಪರ್ಧೆಗಳು ಸೆ.8ರಂದು ಚಡಚಣದ ಸಂಗಮೇಶ್ವರ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ನಡೆಯಲಿವೆ. ಪುರುಷ ಹಾಗೂ ಮಹಿಳೆಯರಿಗಾಗಿ ಅಥ್ಲೆಟಿಕ್ಸ್, ವಾಲಿಬಾಲ್, ಫುಟ್‌ಬಾಲ್, ಖೋ-ಖೋ, ಕಬಡ್ಡಿ, ಥ್ರೋಬಾಲ್ ಹಾಗೂ ಯೋಗಾಸನ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.**

ಆಸಕ್ತ ಕ್ರೀಡಾಪಟುಗಳು ತಮ್ಮ ಹೆಸರು ನೋಂದಾಯಿಸಿಕೊಂಡು, ಆಧಾರ್ ಕಾರ್ಡ್‌ನೊಂದಿಗೆ ಕ್ರೀಡಾಕೂಟದಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿ ಎಂ.ಬಿ. ಬಿರಾದಾರ ಅವರನ್ನು ಮೊ. 94485 80729ಕ್ಕೆ ಸಂಪರ್ಕಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 'ವಚನಾಮೃತ'

**ಮೊಗವಂ ನೋಡಿ ಸೊಗ ಸುರಿಪರ**
**ಕಂಡರಾಗದಯ್ಯ ಬಾಯ್ಬಡುಕರ**
**ದೊಂಬರಾಟ ಬೇಕಿಲ್ಲ ಕಾಣಾ!.**
**ಸೊಗ ಸುರಿದೊಡೆ ಮೊಗ ಹಿಗ್ಗಿಸಲ್**
**ಗೆದ್ದತ್ತಿನ ಬಾಲ ಹಿಡಿವರ್ ಆರಿಲ್ಲ ಇಲ್ಲಿ**
**ಸತ್ಯವಾಣಿ!!.**



**ವಾಣಿ ಭಂಡಾರಿ.**

## ಇಷ್ಟಲಿಂಗ ಪೂಜೆಯಿಂದ ಸಾಮಾಜಿಕ ಸಂಘಟನೆ ಸಾಧ್ಯ: ಸ್ವಾಮೀಜಿ

ಅ.ಶ. ಸುದ್ದಿ ವಿಜಯಪುರ

**ವಿಜಯಪುರ: ನಿತ್ಯ ಇಷ್ಟಲಿಂಗ ಪೂಜೆ ಮಾಡುವುದರಿಂದ ದೇಹ ಹಾಗೂ ಮನಸ್ಸಿಗೆ ಚೈತನ್ಯ ದೊರೆಯುತ್ತದೆ. ಇದರ ಮೂಲಕ ಧಾರ್ಮಿಕ ಸಂಸ್ಕಾರ ಬೆಳೆಸಿ ಸಮಾಜವನ್ನು ಸಂಘಟಿಸಬೇಕು ಎಂದು ಕೂಡಲ ಸಂಗಮ ಲಿಂಗಾಯತ ಪಂಚಮಸಾಲಿ ಮಹಾಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು. ಚಡಚಣ ತಾಲೂಕಿನ ಏಳಿಗಿ (ಪಿ.ಎಚ್) ಗ್ರಾಮದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ 'ಮನೆ ಮನದಲ್ಲಿ ಕೂಡಲ ಸಂಗಮ ಹಾಗೂ ಇಷ್ಟಲಿಂಗ ಪೂಜಾ-ದೀಕ್ಷಾ ಅಭಿಯಾನ'ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.**

ಪಂಚಮಸಾಲಿ ಸಮಾಜದ



ಯುವಕರಿಗೆ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಮೀಸಲಾತಿ ಅಗತ್ಯವಿದ್ದು, ಅದಕ್ಕಾಗಿ ಸಮಾಜದವರು ಒಗ್ಗಟ್ಟಿನಿಂದ ಹೋರಾಟ ನಡೆಸಬೇಕು. ಕರೆ ನೀಡಿದಾಗ ಎಲ್ಲರೂ ಸಂಘಟಿತರಾಗಿ ಶಕ್ತಿ ಪ್ರದರ್ಶಿಸಬೇಕು ಎಂದರು. ಇದೇ ವೇಳೆ ಚಡಚಣ ತಾಲೂಕಿನ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ 10 ಹಾಗೂ ಎಸ್-ಎಸ್‌ಎಲ್‌ಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ 20 ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಚಡಚಣ ತಾಲೂಕು ಪಂಚಮಸಾಲಿ ಸಮಾಜದ ನೂತನ ಅಧ್ಯಕ್ಷರನ್ನು ನೇಮಕ ಮಾಡಲಾಯಿತು. ಕಾರ್ಯಕ್ರಮದಲ್ಲಿ ಚಡಚಣ ಹಾಗೂ ಇಂಡಿ ತಾಲೂಕಿನ ಪಂಚಮಸಾಲಿ ಸಮಾಜದ ವಿವಿಧ ಪದಾಧಿಕಾರಿಗಳು ಹಾಗೂ ಮುಖಂಡರು ಉಪಸ್ಥಿತರಿದ್ದರು.

## ಭಾನಾಪುರದ ಸರ್ಕಾರಿ ಪ್ರೌಢ ಶಾಲೆ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಹೊಸಹೆಜ್ಜೆ: ಸೋಮಶೇಖರ ಹರ್ತಿ

ಅ.ಶ. ಸುದ್ದಿ ಕುಕನೂರು

**ಕುಕನೂರು: ಶಿಕ್ಷಕರು ಸಮಾಜದ ಭವಿಷ್ಯವನ್ನು ರೂಪಿಸುವ ಶಿಲ್ಪಿಗಳಾಗಿದ್ದು, ವಿದ್ಯಾರ್ಥಿಗಳಿಗೆ ಜ್ಞಾನ, ಸಂಸ್ಕಾರ, ಮೌಲ್ಯಗಳು ಹಾಗೂ ಜೀವನದ ದಾ-ರಿಯನ್ನು ತೋರಿಸುವ ಮೂಲಕ ರಾಷ್ಟ್ರ ನಿರ್ಮಾಣದಲ್ಲಿ ಮಹತ್ವದ ಪಾತ್ರ ವಹಿಸುತ್ತಾರೆ ಎಂದು ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಜಿಲ್ಲಾ ಘಟಕದ ಅಧ್ಯಕ್ಷ ಸೋಮಶೇಖರ ಹರ್ತಿ ಹೇಳಿದರು.**

ಕುಕನೂರು ತಾಲ್ಲೂಕಿನ ಭಾನಾಪುರ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಜಿಲ್ಲಾ ಘಟಕ ಕೊಪ್ಪಳ, ಹೈಬ್ರೀಡ್ ನ್ಯೂಸ್ ಹಾಗೂ ಮಹಿಳಾ ಧ್ವನಿ ಸಂಸ್ಥೆಯ ಸಹಯೋಗದಲ್ಲಿ ಶಿಕ್ಷಕರ ದಿನಾಚರಣೆ ನಿಮಿತ್ತ ಹಮ್ಮಿಕೊಂಡಿದ್ದ 'ಶಿಕ್ಷಣ ಸಿರಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿತ್ತು. ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ



ಪೂಜೆ ಸಲ್ಲಿಸಿ, ಪುಷ್ಪನಮನ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಭಾನಾಪುರ ಸರ್ಕಾರಿ ಪ್ರೌಢಶಾಲೆಯು ಜಿಲ್ಲಾ ಮಟ್ಟದಲ್ಲಿ ಗುಣಮಟ್ಟದ ಶಿಕ್ಷಣ, ಶೈಕ್ಷಣಿಕ ಪ್ರಗತಿ ಹಾಗೂ 2025-26 ನೇ ಸಾಲಿನ ಫಲಿತಾಂಶ ಸುಧಾರಣೆಯಲ್ಲಿ 100% ಪ್ರಗತಿ ಸಾಧಿಸಿದ್ದು ಹೆಮ್ಮೆಯ ಸಂಗತಿ, ಉತ್ತಮ ಕಾರ್ಯ ಮಾಡುತ್ತಿದೆ. ಇಲ್ಲಿನ ಶಿಕ್ಷಕರ ಬಳಗವು ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದು, ವೈಯಕ್ತಿಕ ಕಾಳಜಿಯೊಂದಿಗೆ ಪರಿಸರ ಸಂರಕ್ಷಣೆ, ಶಿಸ್ತು ಹಾಗೂ ಸ್ವಚ್ಛತೆಗೆ ಆದ್ಯತೆ ನೀಡುತ್ತಿದೆ. ಅಲ್ಲದೆ, ಸ್ವಂತ ಖರ್ಚಿನಲ್ಲಿ ಶಾಲೆಗೆ ಸುಣ್ಣ-ಬಣ್ಣ ಬಳಿಸುವ ಮೂಲಕ ಶಾಲಾ ಅಭಿವೃದ್ಧಿಗೆ ಕೈಜೋಡಿಸಿರುವುದು ಶ್ಲಾಘನೀಯ ಕಾರ್ಯವಾಗಿದೆ, ಶಿಕ್ಷಕರ ದಿನಾಚರಣೆಯ ಅಂಗವಾಗಿ ಶಿಕ್ಷಣ ಕ್ಷೇತ್ರದಲ್ಲಿ ನಿಷ್ಠೆ, ಬದ್ಧತೆ ಹಾಗೂ ಅತ್ಯುತ್ತಮ ಸೇವೆ ಸಲ್ಲಿಸುತ್ತಿರುವ ಶಿಕ್ಷಕರನ್ನು ಗುರುತಿಸಿ ಗೌರವಿಸುವುದು ಮಹತ್ವದ ಕಾರ್ಯವಾಗಿದೆ.

ಶಿಕ್ಷಕರು ನವ ಸಮಾಜದ ನಿರ್ಮಾತೃಗಳಾಗಿದ್ದು, ಅವರ ಸೇವೆ ಹಾಗೂ ಕೊಡುಗೆಯನ್ನು ಸದಾ ಸ್ಮರಿಸುವ ಅಗತ್ಯವಿದೆ ಎಂದು ಸೋಮಶೇಖರ ಹರ್ತಿ ಹೇಳಿದರು. ಮುಖ್ಯೋಪಾಧ್ಯಾಯ ನಾಗಪ್ಪ ಅಗಸಿಮುಂದಿನ ಮಾತನಾಡಿ, ಶಿಕ್ಷಣ ಕ್ಷೇತ್ರದಲ್ಲಿ ವಿಶಿಷ್ಟ ಸೇವೆ ಸಲ್ಲಿಸುತ್ತಿರುವ ಶಿಕ್ಷಕರನ್ನು ಗುರುತಿಸಿ ಸನ್ಮಾನಿಸಿರುವುದು ಸಮಾಜಕ್ಕೆ ಮಾದರಿಯಾಗಿದೆ. ಇಂತಹ ಗೌರವಗಳು ಶಿಕ್ಷಕರ ಸೇವೆಯನ್ನು ಸಮಾಜದ ಮುಂದೆ ಗುರುತಿಸುವುದರ ಜೊತೆಗೆ, ಇನ್ನಷ್ಟು ಸಮರ್ಪಣಾ ಮನೋಭಾವದಿಂದ ಕಾರ್ಯನಿರ್ವಹಿಸಲು ಪ್ರೇರಣೆ ನೀಡುತ್ತವೆ ಎಂದರು. ಪ್ರಾಸ್ತಾವಿಕವಾಗಿ ಆನಂದಕುಮಾರ ಕನ್ನಾರಿ ಮಾತನಾಡಿ ಶಿಕ್ಷಣ ಮತ್ತು ಶಿಕ್ಷಕರ ಮಹತ್ವದ ಬಗ್ಗೆ ತಿಳಿಸಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಶಿಕ್ಷಕ ಉದಯಕುಮಾರ ತಳವಾರ ಶಿಕ್ಷಣ ಸಿರಿ ಪ್ರಶಸ್ತಿಯು ನಮ್ಮ ಜವಾಬ್ದಾರಿ ಹೆಚ್ಚಿಸಿದ್ದು ಮುಂದಿನ ದಿನಗಳಲ್ಲಿ ಮತ್ತಷ್ಟು ಶ್ರಮವಹಿಸಿ ಕೆಲಸ ಮಾಡಲು ಪ್ರೋತ್ಸಾಹ ಸಿಕ್ಕಂತಾಯಿತು ಎಂದರು. ಈ ಸಂದರ್ಭದಲ್ಲಿ ಶಿಕ್ಷಕರಾದ ಆನಂದಕುಮಾರ ಕನ್ನಾರಿ, ಸತೀಶ ಕಟ್ಟಿಮನಿ, ಉದಯಕುಮಾರ ತಳವಾರ, ಶಿವಾನಂದ ಹೊಸಮನಿ, ಲಕ್ಷ್ಮಿ ತಮ್ಮನಗೌಡರ, ಲಲಿತಾ ನಾಲವಾಡ, ವೀಣಾ ಕುಲಕರ್ಣಿ, ಕರುಣಿಕ ಸಿದ್ದಲಿಂಗೇಶ ಭಜಂತ್ರಿ ಹಾಗೂ ಪರಿಚಾರಕಿ ಶಶಿಕಲಾ ಕೋಳೂರು ಅವರಿಗೆ 'ಶಿಕ್ಷಣ ಸಿರಿ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಮುಖಂಡರಾದ ಬಿ.ಎನ್. ಹೊರಪೇಟಿ, ಕುಬೇರ ಮಜ್ಜಿಗಿ, ಪ್ರಿಯದರ್ಶಿನಿ ಮುಂಡರಗಿಮಠ, ರೇಣುಕಮ್ಮ ಕವಲೂರು, ಅಕ್ಕಮಹಾದೇವಿ ಹಿರೇಮಠ, ರಘುನಾಥ ಸಂಗಳದ, ಅಮರೇಶ ಕಮ್ಮಾರ, ಈರಪ್ಪ ತಳಕಲ್ಲ ಸೇರಿದಂತೆ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಗಣ್ಯರು ಉಪಸ್ಥಿತರಿದ್ದರು.

# ಲೇಖಕರ ದಿನಚರಿ...

## ಗುರು ಬದಲಾಗದೆ ಗುರುತು ಬದಲಾದೀತೆ..?



ಯಾವುದೇ ಹಳೆಯ ಗೆಳೆಯರ ಜೊತೆ ಸೇ-ರಿದಾಗ ಹಳೆಯ ನೆನಪುಗಳ ಬಗ್ಗೆ ಮಾತನಾಡುವ ಪರಿಪಾಠವಿದೆ. ಆಗ ಅವರ ಬಾಲ್ಯದ ಶಿಕ್ಷಕರ ಬಗ್ಗೆ ಮಾತು ಬಂದೇ ಬರುತ್ತದೆ ತಂದೆ ತಾಯಿಗಳ ನಂತರ ಬದುಕಿನ ಹೆಚ್ಚಿನ ಪುಟಗಳಲ್ಲಿರುವವರು ಶಿಕ್ಷಕರು ಮಾತ್ರ .ಅಂದು ಅದೊಂದು ಪೂಜನೀಯ ಸ್ಥಾನ ಪಡೆದ ವೃತ್ತಿ ,ಇಂದು ಪಾಠ ಹೇಳುವ ಶಿಕ್ಷಕಿಗೆ ಆಕೆಯ ವಿದ್ಯಾರ್ಥಿಗಳೇ 27 ಬಾರಿ ಹಿರಿದು ಕೊಂದಿದ್ದಾರೆ ತೆಲಂಗಾಣದಲ್ಲಿ ನಡೆದ ಇತ್ತೀಚಿನ ಈ ಘಟನೆ ಶಿಕ್ಷಕರ ಪರಿಸ್ಥಿತಿಯ ಬಗೆಗಿನ ದೃಷ್ಟಾಂತವಾಗಿದೆ.

ವಿದ್ಯಾರ್ಥಿಗಳಿಗೆ ಅವರ ನಡತೆ ತಿದ್ದಲು ಬೈದರೆ ಶಿಕ್ಷಕರಡೆಗೆ ದ್ವೇಷ ಬೆಳೆಸಿಕೊಳ್ಳುತ್ತಾರೆ ,ಇಲ್ಲವೇ ತಾವೇ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಅದರ ಸಹವಾಸವೇ ಬೇಡ ಎಂದು ಸುಮ್ಮನಿದ್ದರೆ ಅವರ ಕಾರ್ಯದಕ್ಷತೆಯ ಬಗ್ಗೆ ಕೈ ತೋರಿಸುತ್ತಾರೆ. ಶಿಕ್ಷಕ ವೃತ್ತಿ ಪವಿತ್ರವಾದದ್ದು, ಶಿಕ್ಷಕ ವೃತ್ತಿ ಎಂದರೆ ಕೇವಲ ಉದ್ಯೋಗವಲ್ಲ, ಅದು ಸಮಾಜ ನಿರ್ಮಾಣದ ಮಹತ್ತರ ಸೇವೆಯಾಗಿದೆ ಎಂಬ ಹೇಳಿಕೆಗಳ ಮೂಲಕ ಶಿಕ್ಷಕರ ಮೇಲೆ ಅವರ ವ್ಯಕ್ತಿತ್ವದ ಮೇಲೆ ಒಂದು ಸಿದ್ದ ಮಾದರಿಯ ಒತ್ತಡ ಸದಾ ಇರುತ್ತದೆ.

ಹೌದು ಶಿಕ್ಷಕ ವೃತ್ತಿ ಬೇರೆಲ್ಲ ವೃತ್ತಿ ಗಿಂತ ಭಿನ್ನವಾದದ್ದು, ಪವಿತ್ರತೆಯ ಪಟ್ಟ ಕಟ್ಟಿಕೊಂಡದ್ದು ಅವನು ಸೂಕ್ಷ್ಮ ಮನಸ್ಸುಗಳ ಜೊತೆ ಕಾರ್ಯನಿರ್ವಹಿಸು ಬೇಕಾದವನು ಭಿನ್ನ ವ್ಯಕ್ತಿತ್ವದ ವಿಭಿನ್ನ ಮನಸ್ಸಿನ ಜೀವಂತ ವ್ಯಕ್ತಿಗಳೊಡನೆ ವ್ಯವಹರಿಸುವವನಾದ ಕಾರಣ ಅವನ ಯೋಚನಾಲಹರಿ ನಡವಳಿ ಕೆಯ ಮಾದರಿ ಪ್ರತಿಕ್ರಿಯಿ ಸಬೇಕಾದ ವಿಧಾನ ಸ್ವಲ್ಪ ಭಿನ್ನವಾಗಿರಬೇಕಾದದ್ದು ನಿರೀಕ್ಷಣೆಯವಾದದ್ದು ,ಇದು ಮನಸುಗಳ ನಡುವಿನ ಸಂಬಂಧವಾದ ಕಾರಣ ಭೌತಿಕ ಪ್ರಕ್ರಿಯೆಯಾದ ಪಾಠ ಮಾಡುವುದು ಎಂಬ ಸಿದ್ಧಸೂತ್ರದಿಂದ ಆಚೆ ಬಂದು ಕಲಿಕೆ ಎಂಬುದು ವಿಸ್ತಾರವಾದ, ಸೂಕ್ಷ್ಮವಾದ ಅಂಶ ಎಂಬುದನ್ನು ಮೊದಲು ತಾನು ಮನಗಾಣಬೇಕು. ಇಲ್ಲಿ ನಾವು ಕೇವಲ ಪರಿಸ್ಥಿತಿ ವ್ಯವಸ್ಥೆ ,ಅವ್ಯವಸ್ಥೆ ಸಮಸ್ಯೆಯ ಕಾರಣ ನೀಡಿ ಜವಾಬ್ದಾ-ರಿಯಿಂದ ನುಣಿ ಚಿಕೊಳ್ಳುವುದರಿಂದ ಯಾವುದೇ ಪ್ರಯೋಜನವಿಲ್ಲ. ಎಲ್ಲಾ ಕಾಲಕ್ಕೂ ಒಂದೇ ರೀತಿಯ ಸಾಮಾಜಿಕ, ಮಾನಸಿಕ ಪರಿಸ್ಥಿತಿ ಇರುತ್ತದೆ. ಹಿಂದಿನ ಕಾಲದಲ್ಲಿ ಆ ರೀತಿಯ ಗೌರವವಿತ್ತು.

ಈ ರೀತಿಯ ಮನ್ನಣೆ ಇತ್ತು ಎಂದು ನಾವು ಬದಲಾಗದೆ, ಅಪ್ಡೇಟ್ ಆಗದೆ, ಬದಲಾದ ಪರಿಸ್ಥಿತಿಗೆ ನಮ್ಮ ವರ್ತನೆಯನ್ನು ಕೌಶಲ್ಯವನ್ನು ಬದಲಾಯಿಸಿಕೊಳ್ಳದೆ ವ್ಯವಸ್ಥೆಯನ್ನು ವಿದ್ಯಾರ್ಥಿಗಳನ್ನು ದೂ ರುವುದು ಸಮಾಜವನ್ನು ದೂಷಿಸುವುದು ಸಮಂಜಸವಲ್ಲ ನಿಜ. ಶಿಕ್ಷಕರು ಇಂದು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ, ಕಲಿಕೇತರ ಕೆಲಸಗಳು ಹೆಚ್ಚುವೆ. ತಂತ್ರಜ್ಞಾನದ ಒತ್ತಡ ,ಹತ್ತಾರು ೦ಕಕ ಗಳ ಬಳಕೆ, ಗಣತಿಗಳು ಸಮೀಕ್ಷೆಗಳು, ಚುನಾವಣಾ ಕಾರ್ಯಗಳು, ತರಬೇತಿಗಳು ಜೊತೆಗೆ ವೈಯಕ್ತಿಕ ಬದುಕಿನ ಜಂಜಾಟಗಳು ಇವೆಲ್ಲದರ ಮಧ್ಯೆ ಗುರುವಾಗಿ ಉಳಿಯಬೇಕಾಗಿದೆ.

ಎಲ್ಲವನ್ನು ಎದುರಿಸುವ ಪಾಠ ಕಲಿಸುವ ಶಿಕ್ಷಕ ಇವೆಲ್ಲವನ್ನು ಎದುರಿಸುತ್ತಾನೆ, ಎದು-ರಿಸುವ ಸಾಮಥ-ರ್ಥ್ಯ ಅವನಲ್ಲಿದೆ. ಅದನ್ನು ಈಗಾಗಲೇ ಸಾಧಿಸಿ ತೋ- ರಿಸಿದ್ದಾನೆ. ಇದಕ್ಕೆ ಇಂದು ಪ್ರಶಸ್ತಿ ಪಡೆಯುತ್ತಿರುವ ಅನೇಕ ಶಿಕ್ಷಕರೇ ಉದಾಹರಣೆ. ವ್ಯವಸ್ಥೆ, ಸಮಾಜವು ಸಹ ಇದನ್ನು ಅರ್ಥ ಮಾಡಿಕೊಳ್ಳಬೇಕಿದೆ ಕೇವಲ ಏಕಮುಖ ಬದಲಾವಣೆಯಿಂದ ಯಾವುದೂ ಪರಿಪೂರ್ಣವಾಗುವುದಿಲ್ಲ, ವ್ಯವಸ್ಥೆ, ಸಮಾಜವು ಸಹ ಇದನ್ನು ಅರ್ಥಮಾಡಕೊಳ್ಳ ಬೇಕಾಗಿದೆ.

ಸಮಾಜದ ಎಲ್ಲ ಸಮಸ್ಯೆಗಳಿಗಿಂತ ಇದನ್ನು ಆದ್ಯತೆಯಾಗಿ ನೋಡುವ ವಿಶಾಲ ಮನೋ ಧರ್ಮವನ್ನು ಸಮಾಜ ತೋ-ರಿಸುವವರೆಗೆ ಪರಿಪೂರ್ಣ ಬದಲಾವಣೆ ಸಾಧ್ಯವಿಲ್ಲ, ಮುನ್ನುಗುವ ಸಾಮರ್ಥ್ಯ ಶಿಕ್ಷಕನಲ್ಲಿದೆ ರಾಧಾಕೃಷ್ಣ ,ರಾಮಕೃಷ್ಣ ವಿವೇಕರಂತಹ ಮತ್ತು ಕಾಲಂ ರಂತಹ ಶಿಕ್ಷಕರ ಉದಯ ಕಾಲಕಾಲಕ್ಕೆ ಭಾರತ ದೇಶದಲ್ಲಿ ಆಗುತ್ತಿರುತ್ತದೆ. ಏಕೆಂದರೆ ಎಲ್ಲವನ್ನು ಎದುರಿಸಿ ನಿಲ್ಲಬಲ್ಲವನೇ ಗುರು. ಗುರುವೇ ನಿನಗೆ ಕೋಟಿ ಕೋಟಿ ಶರಣು.



ಮಹೇಶ್ ಜಿ.ಟಿ, ತಿಪಟೂರು.

## ಶಿಕ್ಷಕರು ಎಂದರೆ..!?




**'ಶಿಕ್ಷಕ' ಎನ್ನುವುದು ಮೂರು ಅಕ್ಷರಗಳ ಒಂದು ಪದ ಮಾತ್ರವಲ್ಲ, ಬದಲಿಗೆ ಸಮಾಜದ ಅತಿ ದೊಡ್ಡ ಶಕ್ತಿ, ನಾಗರಿಕ ಸಮಾಜದ ಅಡಿಪಾಯ ಮತ್ತು ಪ್ರತಿಯೊಬ್ಬ ಮನುಷ್ಯನ ಜೀವನವಕ್ಕೆ ರೂಪವನ್ನು ಒಂದು ಶ್ರೇಷ್ಠ ವಾದ ಉಳಿ.! ಈ ವೃತ್ತಿ ಗಿರುವ ಶಕ್ತಿ ಮತ್ತು ಪದದಲ್ಲಿರುವ ಅರ್ಥ ಅಮೋಘವಾದದ್ದು.**

ಈ ಪದದಲ್ಲಿರುವ ಪ್ರತಿಯೊಂದು ಅಕ್ಷರವು ಒಂದೊಂದು ಆಳವಾದ ಅರ್ಥವನ್ನು ತಿಳಿಸಿಕೊಡುತ್ತಾ, ಒಟ್ಟು ಪದಕ್ಕೆ ಗಂಭೀರವಾದ ಅಥ-ರ್ವವನ್ನು ಕೊಡುತ್ತದೆ.' ಶಿ' ಎಂದರೆ ಶಿಕ್ಷಣ ಮತ್ತು ಶಿಸ್ತು, ಅಂದರೆ ಶಿಕ್ಷಕನಾದವನು ವಿದ್ಯಾರ್ಥಿಗಳಿಗೆ ಅಕ್ಷರ ಜ್ಞಾನವನ್ನು, ಲೋಕಜ್ಞಾನವನ್ನು ನೀಡಿ ಅವರ ಬೌದ್ಧಿಕ ಮಟ್ಟವನ್ನು ಹೆಚ್ಚಿಸುವುದರ ಜೊತೆಗೆ ಅವರಲ್ಲಿ ಶಿಸ್ತನ್ನು ಮೂಡಿಸುವವರು ಎಂದರ್ಥ. ಇಲ್ಲಿ ಶಿಸ್ತು ಎಂದರೆ ಕಾಲ ಪರಿಪಾಲನೆ, ಉತ್ತಮ ನಡತೆ,ಕೆಲಸಗಳಲ್ಲಿನ ಶ್ರದ್ದೆ ಇವೆಲ್ಲವೂ ಸೇರುವುದು.' ಕ್ಷ' ಎಂದರೆ ಕ್ಷಮೆ ಮತ್ತು ಕ್ಷಮತೆ ಎಂದು.

ಕಲಿಕೆಯ ಸಂದರ್ಭದಲ್ಲಿ ಯಾವುದೇ ವಿದ್ಯಾರ್ಥಿ ತಪ್ಪು ಮಾಡುವುದು ಸಹಜ. ಅಂತಹ ಸಂದರ್ಭಗಳಲ್ಲಿ ಶಿಕ್ಷಕರು ಪ್ರತಿ ಬಾರಿಯೂ ವಿದ್ಯಾರ್ಥಿಯನ್ನು ದಂಡಿಸದೆ ಕೆಲವು ಬಾರಿ ಕ್ಷಮೆಯನ್ನು ನೀಡಿ ಪ್ರೀತಿಯಿಂದ ತಿಳಿಸಿ ಕೊಡಬೇಕಾಗುತ್ತದೆ. ಹಾಗೆಯೇ ಪ್ರತಿಯೊಂದು ಮಗುವಿನಲ್ಲೂ ವಿಶೇಷ ಪ್ರತಿಭೆಯೊಂದು ಇರುತ್ತದೆ ಎನ್ನುವುದನ್ನು ಅರಿತು ಆ ಪ್ರತಿಭೆಯನ್ನು ಅಥವಾ ಕ್ಷಮತೆಯನ್ನು ಹೊರ ತರುವ ವಿಶೇಷ ಕೆಲಸವು ಶಿಕ್ಷಕರದ್ದಾಗಿರುತ್ತದೆ.

ಇನ್ನೂ ಕೊನೆಯದಾಗಿ 'ಕ 'ಎಂದರೆ ಕರುಣೆ ಮತ್ತು ಕಲ್ಯಾಣ ಎಂದು. ವಿದ್ಯಾರ್ಥಿಗಳ ಬಗೆಗೆ ಸದಾ ಕರುಣೆ ಮತ್ತು ಪ್ರೀತಿಯ ಭಾವವನ್ನು ತೋರುತ್ತ ಸದಾಕಾಲಕ್ಕೂ ಅವರ ಕಲ್ಯಾಣ ಮತ್ತು ಅಭಿವೃದ್ಧಿಯನ್ನು ಬಯಸುವ ಜೀವವೇ ಶಿಕ್ಷಕ ಎಂದಾಗಿದೆ.

ಒಟ್ಟಾರೆಯಾಗಿ ಶಿಕ್ಷಕ ವೃತ್ತಿ ಇತರ ಉದ್ಯೋಗಗಳಂತೆ ಒಂದು ಉದ್ಯೋಗ ಮಾತ್ರವಲ್ಲ.ಅದೆಷ್ಟೋ ಜನರ ಜೀವನವನ್ನು ರೂಪಿಸುವ ,ದೇಶದ ಭವಿಷ್ಯವನ್ನು ತಿದ್ದುವ, ಭವಿಷ್ಯದ ಪೀಳಿಗೆಯ ಮತ್ತು ಸಮಾಜದ ಕಲ್ಯಾಣಕ್ಕಾಗಿ , ನಿಸ್ವಾರ್ಥ ಭಾವದಿಂದ ಶ್ರಮಿಸುವ ಒಂದು ಶ್ರೇಷ್ಠ ಸ್ಥಾನವಾಗಿದೆ.



ಪ್ರಿಯಾ ಶ್ರೀ ವಿಧಿ, ಪುತ್ತೂರು.

## ನ್ಯಾನೋ ಕತೆ ಒಂದು ನಗು

**ರಾಯರ ಮನಸ್ಸನ್ನು ಒಂದಲ್ಲ ಒಂದು ಚಿಂತೆ ಸದಾ ಕಾಡುತ್ತಿತ್ತು. ಒಂದು ಕಡೆ ವರ್ಷದ ಹಿಂದೆಯೇ ಪತ್ನಿಯನ್ನು ಕಳೆದುಕೊಂಡ ದುಃಖ; ಮತ್ತೊಂದು ಕಡೆ ಗಂಡುಮಕ್ಕಳ ದುರ್ವರ್ತನೆ. ಕಿರಿಯ ಮಗ ಮಕ್ಕಳಿಲ್ಲ ಎಂಬ ಕೊರಗಿನಲ್ಲಿ ಬೇಯುತ್ತಿದ್ದರೆ, ಇನ್ನೊಬ್ಬ ಮಗ ಸಾಲಸೋಲ ಮಾಡಿ ಮನೆಯ ಆದಾಯವನ್ನೆಲ್ಲ ತನ್ನ ದುಶ್ಚಟಗಳಿಗೆ ಸುರಿಯುತ್ತಿದ್ದ.**



ಪತಿಯ ಮರಣದ ಬಳಿಕ ಗಂಡನ ಮನೆಯ ಸಂಬಂಧವೇ ಬೇಡವೆಂದು ದೂರವಾದ ಸೊಸೆಯ ಕಾರಣದಿಂದ, ಮೊಮ್ಮಗನ ಪ್ರೀತಿ ಮತ್ತು ನಗುವಿನಿಂದಲೂ ರಾಯರು ವಂಚಿತರಾಗಿದ್ದರು. ಈ ಎಲ್ಲ ನೋವುಗಳನ್ನು ಎದೆಯೊಳಗೆ ಹುದುಗಿಸಿಕೊಂಡ ರಾಯರ ಮನಸ್ಸು ಸದಾ ಉರಿಯುತ್ತಿತ್ತು. ಬೇಸಾಯವನ್ನೇ ನೆಚ್ಚಿ ಹೊಲದಲ್ಲಿ ದುಡಿದು ಚಿಂತೆ ಮರೆಯೋಣವೆಂದರೆ, ಬಾರದ ಮಳೆ ಮತ್ತು ಸುಡುವ ಬಿಸಿಲು ಅವರ ಸಂಕಟವನ್ನು ಇನ್ನಷ್ಟು ಹೆಚ್ಚಿಸುತ್ತಿದ್ದವು. ಒಳಗೂ ಹೊರಗೂ ಬೆಂಕಿ ಹೊತ್ತಂತಿ-ದ್ದ ಆ ಬದುಕಿನಲ್ಲಿ, ಮನದ ವೇದನೆಯನ್ನು ಯಾರೊಂದಿಗೂ ಹಂಚಿಕೊಳ್ಳದೆ ಎಷ್ಟೋ ಬಾರಿ ಏಕಾಂತದಲ್ಲಿ ಕಣ್ಣೀರು ಸುರಿಸಿದ್ದರು.

ಈ ಎಲ್ಲವೂ ತನ್ನ ಕರ್ಮಫಲವೆಂದು ಮನಸ್ಸಿಗೆ ಸಮಾಧಾನ ಹೇಳಿಕೊಳ್ಳಲು ಯತ್ನಿಸಿದರೂ, ಅವರ ಅಂತರಂಗ ಮಾತ್ರ ಕ್ಷೋಭೆಯಿಂದಲೇ ತುಂಬಿತ್ತು. ಎಂದಿನಂತೆ ಒಂದು ದಿನ ಪೇಟೆಯ ಕಡೆ ಹೊರಟ ರಾಯರು ದಾರಿಮಧ್ಯೆ ದಣಿವಿನಿಂದ ಕುಳಿತುಬಿಟ್ಟರು. ತಲೆ ಸುತ್ತಿದಂತಾಗಿ, "ಇದೇ ನನ್ನ ಬದುಕಿನ ಕೊನೆಯ ಕ್ಷಣವೋ?" ಎಂಬ ಭಯ ಅವರನ್ನು ಆವರಿಸಿತು. ಅದೇ ಸಮಯದಲ್ಲಿ ಅದೇ ದಾ-ರಿಯಲ್ಲಿ ಬರುತ್ತಿದ್ದ ಅವರ ಹನ್ನೆರಡು ವರ್ಷದ ಮೊಮ್ಮಗ ಮತ್ತು ಸೊಸೆ ರಾಯರ ಬಳಿಗೆ ಬಂದರು. ಸೊಸೆ ಅವರ ಕೈ ಹಿಡಿದು ಎಬ್ಬಿಸಿದಳು. ಮೊಮ್ಮಗ ಪ್ರೀತಿಯಿಂದ ಒಂದು ಮುದ್ದಾದ ನಗುವನ್ನು ಬೀರಿದ. ಆ ಒಂದು ನಗು ರಾಯರ ದೇಹಕ್ಕಷ್ಟೇ ಅಲ್ಲ, ಮನಸ್ಸಿಗೂ ಹೊಸ ಚೈತನ್ಯ ತುಂಬಿತು. ಕ್ಷಣಮಾತ್ರದಲ್ಲಿ ಅವರ ದಣಿವು, ನಿರಾಶೆ ಮತ್ತು ನೋವು ಕರಗಿದಂತಾಯಿತು. ಸೊಸೆ ಮತ್ತು ಮೊಮ್ಮಗನೊಂದಿಗೆ ಮನೆ ಕಡೆಗೆ ಹೆಜ್ಜೆ ಹಾಕುತ್ತಿದ್ದ ರಾಯರ ಮನಸ್ಸಿನಲ್ಲಿ ಒಂದೇ ಭಾವ ಮೂಡಿತ್ತು?ಬಾಂಧವ್ಯ ಗಟ್ಟಿಯಾಗಿದ್ದರೆ ಬದುಕಿಗೂ ಗಟ್ಟಿತನ ಬರುತ್ತದೆ; ಪ್ರೀತಿಯಿಂದ ಅರಳಿದ ಒಂದು ನಗು ಬದುಕಿಗೆ ಮತ್ತೆ ಚೈತನ್ಯ ತುಂಬಬಲ್ಲದು.



ಶುಭಲಕ್ಷ್ಮಿ ಆರ್ ನಾಯಕ
ಹವ್ಯಾಸಿ ಬರೆಹಗಾರ್ತಿ

## ಮಮತಾಸ್ ಕಿಚನ್



ಇಪ್ಪತ್ತು ವರ್ಷಗಳಿಂದ ಒಂದೇ ಜಾಗದಲ್ಲಿ ಇದ್ದುಕೊಂಡು, ಅಲ್ಲಿಗೆ ಸಂಪೂರ್ಣವಾಗಿ ಒಗ್ಗಿ ಹೋಗಿದ್ದೆ. ಇತ್ತೀಚಿಗೆ ಮನೆಯವರು ಕೆಲಸ ಬಿಟ್ಟು ತಮ್ಮದೇ ಬಿಸಿನೆಸ್ ಶುರು ಮಾಡಿದ್ರು. ಅವರ ಫ್ಯಾಕ್ಟರಿ ಮನೆಯಿಂದ ದೂರವೇ. ಪ್ರತಿದಿನ ಡ್ರೈವ್ ಮಾಡ್ತಾ ಹೋಗಿ ಬರೋದು ಕಷ್ಟ ಆಗ್ತಿತ್ತು. ಮನಸಿಲ್ಲದಿದ್ರು ಮನೆಯವರಿಗಾಗಿ ಫ್ಯಾಕ್ಟರಿ ಹತ್ರ ಇರೋ ಅಪಾರ್ಟ್ಮೆಂಟ್ ಗೆ ಬಾಡಿಗೆಗೆ ಬರಬೇಕಾಯ್ತು. ಎಲ್ಲವೂ ಹೊಸತು, ಯಾರ ಪರಿಚಯ ಇಲ್ಲ, ಅಕ್ಕ ಪಕ್ಕದ ಜಾಗ ಗೊತ್ತಿಲ್ಲ. ಬಾಡಿಗೆ ಮನೆ ಅಂತ ಜಾಸ್ತಿ ಸಾಮಾನು ಕೂಡಾ ತಂದಿಲ್ಲ. ಇರೋದ್ರಲ್ಲೇ ನಡೆಯುತ್ತೆ ಅಂತ, ಅಡುಗೆ ಮಾಡಲು ಗ್ಯಾಸ್ ಸ್ಟವ್, ಒಂದು ಮಿಕ್ಸಿ ಹಾಗೇ ಕೆಲವೊಂದು ಚಿಕ್ಕ ಪುಟ್ಟ ವಸ್ತು ಖರೀದಿ ಮಾಡಿದ್ದು.ಒಂತರಾ ಹೊಸ ಅನುಭವ. ಮದುವೆಯಾದ ಮೊದಲ ದಿನಗಳು ನೆನಪಾದ್ವು. ಸಾಮಾನ್ಯವಾಗಿ ಯಾರೇ ಹೊಸ ಜೀವನ ಕಟ್ಟಿ ಕೊಳ್ಳಲು ಶುರು ಮಾಡಿದಾಗ ಎಲ್ಲರ ಪರಿಸ್ಥಿತಿ ಹೀಗೆಯೇ ಇರುತ್ತೆ. ಹೊಸ ಅಪಾರ್ಟ್ಮೆಂಟ್ ಗೆ ಬಂದು ನಿಧಾನಕ್ಕೆ ಅಡ್ಜಸ್ಟ್ ಆಗ್ತಾ ಇದೀನಿ.ಮೊದಲಿನಿಂದ ಅಡುಗೆ ಮಾಡೋದು ಇಷ್ಟದ ಸಂಗತಿ. ಅದರಲ್ಲೂ ತರ ತರದ ಅಡುಗೆ ಮಾಡಿ ತಟ್ಟೆಯಲ್ಲಿ ಜೋಡಿಸಿ ಮನೆಯವರಿಗೆ ಕೊಟ್ಟಾಗ ಅದೇನೋ ಖುಷಿ, ಸಂತೃಪ್ತಿ.ಮನೆಯವರು, ಮಕ್ಕಳು ಊಟ ಮಾಡಿ ಚೆನ್ನಾಗಿದೆ ಅಂದಾಗ ಸಿಗೋ ಖುಷಿಯೇ ಬೇರೆ.

ಈಗಲೂ ಅಡುಗೆ ಮಾಡುವ ಉತ್ಸಾಹ ಸ್ವಲ್ಪವೂ ಕುಂದಿಲ್ಲ.ಅಲ್ಲಿಯ ಹಾಗೇ ದೊಡ್ಡ ಕಿಚನ್ ಇಲ್ಲ,ಹೂ ಗಿಡಗಳಿಲ್ಲ.ಜಾಸ್ತಿ ಪಾತ್ರೆ ಪಡುಗಗಳಿಲ್ಲ. ಕಿಚನ್ ಪಕ್ಕಕ್ಕೆ ಒಂದು ಪುಟ್ಟ ಡ್ರೈ ಬಾಲ್ಕನಿ ಇದೆ.. ಅಲ್ಲಿ ಒಂದು ಪುಟಾಣಿ ಕಟ್ಟೆಯಿದೆ.ಅಲ್ಲಿ ನಾನು ಮಾಡಿದ ಅಡುಗೆ ಪುಟ್ಟ ಪುಟ್ಟ ಬಟ್ಟಲು, ತಟ್ಟೆ ಇಟ್ಟು ಫೋಟೋ ತೆಗಿತೀನಿ, ಅಷ್ಟರಲ್ಲೇ ಖುಷಿ ಪಡ್ತೀನಿ.ಮನೆಯವರು ಹೇಳ್ತ ಇದ್ರು, ಅದೆಷ್ಟು ತಾಳ್ಮೆ, ಉತ್ಸಾಹ ನಿನಗೆ. ಇಷ್ಟರಲ್ಲೇ ಅದೆಂಗೋ ಅಡ್ಜಸ್ಟ್ ಮಾಡ್ಕೊಂಡು, ಬೇಸರ ಇಲ್ಲದೇ ಅಡುಗೆ ಮಾಡ್ತಿಯಾ,ಫೋಟೋ ತೆಗಿತೀಯ, ವಿಡಿಯೋ ಮಾಡ್ತಿಯ. ಎಲ್ಲವನ್ನ ಅದು ಹೇಗೆ ನಿಭಾಯಿಸ್ತೀಯ ಅಂತ.ನನಗೆ ಅನಿಸೋದು, ಆಸಕ್ತಿ ಇದ್ರೆ ಎಲ್ಲವೂ ಸಾಧ್ಯ.ಎಲ್ಲವೂ ಸರಾಗವಾಗಿ ಆಗುತ್ತೆ ಅಂತ. ಅಡುಗೆ, ಫೋಟೋ, ತಟ್ಟೆಯಲ್ಲಿ ಮಾಡಿದ ಅಡುಗೆ ಜೋಡಿಸೋದು ನಂಗಿಷ್ಟ.

ಇದರಿಂದ ನನ್ನ ಬೇಸರ, ನೋವು ಮಾಯ ಆಗುತ್ತೆ, ಅದೇನೋ ಖುಷಿ ಸಿಗುತ್ತೆ.. ಜಾಸ್ತಿ ಪಾತ್ರೆ ಇಲ್ಲ, ಹೊಸ ಮನೆಯಲ್ಲಿ ಫ್ರಿಡ್ಜ್ ಇಲ್ಲ, ವಾಷಿಂಗ್ ಮಷೀನ್ ಇಲ್ಲ, ಇರೋದ್ರಲ್ಲೇ ಅಡ್ಜಸ್ಟ್ ಮಾಡ್ಕೊಂಡು ಹೋಗ್ತಾ ಇದೀನಿ, ಒಂತರಾ ಹೊಸ ಅನುಭವ. ತರಕಾರಿ ಕೆಡದ ಹಾಗೇ, ಮೊಸರು ತಂದ್ರೆ ಪಾತ್ರೆಯಲ್ಲಿ ನೀರು ಹಾಕಿ, ಅದರಲ್ಲಿ ಮೊಸರು ಪ್ಯಾಕೆಟ್ ಇಡ್ತೀನಿ, ತರಕಾರಿ ತಣ್ಣನೆಯ ಬಟ್ಟೆಯ ಮೇಲೇ ಹರಡ್ತೀನಿ, ಕೊತ್ತಂಬರಿ ಸೊಪ್ಪು ಲೋಟದಲ್ಲಿ ನೀರು ಹಾಕಿ ಇಡ್ತೀನಿ, ಎಲ್ಲಾ ಹಳೆ ಕಾಲದ ಹಾಗೇ. ಮೊನ್ನೆ ದೋಸೆ ಹಿಟ್ಟು ಉಳೀತು, ಜಾಸ್ತಿ ನೀರು ಹಾಕಿ, ತಟ್ಟೆಯಲ್ಲಿ ನೀರು ಹಾಕಿ, ಅದರಲ್ಲಿ ಹಿಟ್ಟಿನ ಪಾತ್ರೆ ಇಟ್ಟೆ. ಮರು ದಿನಕ್ಕೆ ಮೇಲಿನ ನೀರೆಲ್ಲ ಚಲ್ಲಿ, ಸ್ವಲ್ಪ ಅಕ್ಕಿ ಹಿಟ್ಟು ಕಲಸಿದೆ,

ಎಷ್ಟು ಚಂದದ ದೋಸೆ ಬಂತು, ಹಿಟ್ಟು ಕೂಡಾ ಹುಳಿ ಇರ್ಲಿಲ್ಲ.ಚಿಕ್ಕ ಪುಟ್ಟ ವಿಷಯಗಳಲ್ಲೇ ಅದೆಷ್ಟು ಖುಷಿ ಇರುತ್ತೆ ಅಲ್ವಾ.ಮೊದಲೆಲ್ಲ ಫ್ರಿಡ್ಜ್, ವಾಷಿಂಗ್ ಮಷೀನ್ ಎಲ್ಲಿತ್ತು? ಆಗಿನ ಕಾಲದ ಹೆಣ್ಣು ಮಕ್ಕಳು ಕೈಲಿ ಬಟ್ಟೆ ಒಗೆಯೋದು, ಒಳಕಲ್ಲಿನಲ್ಲಿ ಮಸಾಲೆ, ದೋಸೆ ಹಿಟ್ಟು ರಬ್ಬೋರು, ಬೀಸೆಕಲ್ಲಿನಲ್ಲಿ ಹಿಟ್ಟು, ರವೆ ಮಾಡೋರು, ಅರಿಶಿಣ ಪುಡಿ ಕೂಡಾ ಬೀಸೆಕಲ್ಲಿನಲ್ಲಿ ಮಾಡೋರು. ಇನ್ನೂ ಖಾರದ ಪುಡಿ, ಧನಿಯಾ, ಸಾಂಬಾರ್ ಪುಡಿ ಒನಕೆಯಲ್ಲಿ ಕುಟ್ಟಿ ಪುಡಿ ಮಾಡ್ತಾ ಇದ್ರು. ಕಾಲಕ್ರಮೇಣ ಎಲ್ಲವೂ ಒಂದೊಂದೇ ಮಾಯವಾಗಿ ಈಗೆಲ್ಲ ಒಂದು ಸ್ವಿಚ್ ಒತ್ತಿದರೆ ಸಾಕು ಎಲ್ಲಾ ಕೆಲಸಗಳು ಸರಾಗವಾಗಿ ಆಗಿ ಹೋಗುತ್ತೆ.ಮೊದಲಿನ ಹೆಂಗಸರ ಹಾಗೇ ನಾವು ಗಟ್ಟಿಮುಟ್ಟಿಲ್ಲ ಬಿಡಿ, ಮೊದಲಿನ ಆಹಾರ, ಜೀವನ ಪದ್ಧತಿ ಎಲ್ಲವೂ ಭಿನ್ನಾವಾಗಿತ್ತು.

ಎಲ್ಲವೂ ನೈಸರ್ಗಿಕವಾಗಿ ದೊರೆಯುತಿತ್ತು. ಈಗ ಕುಡಿಯುವ ನೀರು, ಗಾಳಿ, ಆಹಾರ ಎಲ್ಲವೂ ಕಲುಷಿತ.ಬಹುಷಃ ಮನುಷ್ಯನ ಅತೀ ಆಸೆ, ವ್ಯಾಮೋಹವೇ ಕಾರಣ ಅನ್ನಿಸುತ್ತೆ. ಈ ಅಡುಗೆ ಮಾಡಿ ಜೋಡಿಸುವದು ಅಭ್ಯಾಸ ಕರೋನ ಸಮಯದಲ್ಲಿ ಶುರು ಆಯ್ತು. ಆಗ ತುಂಬಾ ಸಮಯ ಸಿಗ್ತಾ ಇತ್ತು. ಹೊರಗೆ ಹೋಗೋ ಹಾಗಿಲ್ಲ, ಯಾರ ಭೇಟಿಯೂ ಇಲ್ಲ, ಎಷ್ಟು ಅಂತ ಮನೆ ಕೆಲಸ, ಟಿವಿ ನೋಡೋದು, ಮೊದ ಮೊದಲು ಜ್ಯೂಸು, ಸಂಜೆಯ ತಿಂಡಿ ಮಾಡಿ ಗಾಜಿನ ಲೋಟ, ತಟ್ಟೆಗೆ ಹಾಕಿಟ್ಟಾಗ ಎಷ್ಟು ಚಂದ ಅಲಾ ಅನಿಸಿ ಫೋಟೋ ತೆಗೆಯಲು ಶುರು ಮಾಡಿದ್ದು. ಪ್ರತೀ ದಿನ ಯಾವುದಾದರು ಹಣ್ಣಿನ ಜ್ಯೂಸು ಅಥವಾ ಮಿಲ್ಕ್ ಶೇಕ್ ಮಾಡ್ತಿದ್ದೆ.

ಜೊತೆಗೆ ಸ್ಯಾಂಡ್ ವಿಚ್, ಬಿಸಿ ಅವಲಕ್ಕಿ, ಬಿಸಿ ಬಿಸಿ ಉಪ್ಪಿಟ್ಟು, ಜೋಳ ಬೇಯಿಸಿ ತುಪ್ಪದಲ್ಲಿ ಹುರಿದು ಉಪ್ಪು ಖಾರ ಹಾಕಿ ಹಾಗೇ ಫ್ರೈ ಮಾಡ್ತಿದ್ದೆ. ನಿಧಾನಕ್ಕೆ ಮಾಡಿದ ಅಡುಗೆ ಬಟ್ಟಲಲ್ಲಿ ಇಟ್ಟು ತಟ್ಟೆಯಲ್ಲಿ ಜೋಡಿಸತೊಡಗಿದೆ.ಮೊದಲು ಅಷ್ಟು ಪರ್ಫೆಕ್ಟ್ ಆಗಿ ಬರ್ತಾ ಇರ್ಲಿಲ್ಲ.. ನಿಧಾನಕ್ಕೆ ಮಾಡ್ತಾ ಮಾಡ್ತಾ ಈಗ ತುಂಬಾ ಚಂದವಾಗಿ ಜೋಡಸ್ತೀನಿ. ಅಚ್ಚುಕ್ಕಟ್ಟು ಮೇಡಂ ಅಂತ ಹೆಸರು ಕೂಡಾ ಸಿಕ್ಕಿದೆ. ದೊಡ್ಡವರು ಹೇಳ್ತಾರೆ ಅಲ್ವಾ ಪ್ರಾಕ್ಟೀಸ್ ಮೇಕಸ್ ಮ್ಯಾನ್ ಪರ್ಫೆಕ್ಟ್ ಅಂತ ಹಾಗೇ. ನಾನು ಮಾಡಿದ ಅಡುಗೆ ಊಟ ಮಾಡಿದವರೆಲ್ಲರೂ ಹೇಳ್ತಾರೆ ತುಂಬಾ ರುಚಿಯಾಗಿ ಅಡುಗೆ ಮಾಡ್ತೀರಾ ಅಂತ. ಅದರಲ್ಲೇ ಸಂತೃಪ್ತಿ ನನಗೆ. ಮಮತಾಸ್ ಕಿಚನ್ ಅನ್ನೋದು ನನಗೆ ಹೆಮ್ಮೆ.



ಮಮತ ತೋಟೇಶ್ ಪುಣೆ. ಮಹಾರಾಷ್ಟ್ರ.

# ಕೊಪ್ಪಳ ಏತ ನೀರಾವರಿ–ಕೃಷ್ಣ 'ಬಿ' ಸ್ಕೀಮ್ ಕುರಿತು ರೈತರ ಆಕ್ರೋಶ

ಅ.ಶ. ಸುದ್ದಿ ಕನಕಗಿರಿ

**ಕನಕಗಿರಿ: ಕೊಪ್ಪಳ ಏತ ನೀರಾವರಿ ಯೋಜನೆ ಹಾಗೂ ಕೃಷ್ಣ 'ಬಿ' ಸ್ಕೀಮ್‌ಗೆ ಸಂಬಂಧಿಸಿದಂತೆ ರೈತರಿಗೆ ಸಮರ್ಪಕ ಮಾಹಿತಿ ನೀಡಲಾಗುತ್ತಿಲ್ಲ. ಯೋಜನೆಯ ಉದ್ದೇಶದ ಕುರಿತು ರೈತರಲ್ಲಿ ಗೊಂದಲ ಹಾಗೂ ತಪ್ಪು ಕಲ್ಪನೆ ಮೂಡಿಸಲಾಗುತ್ತಿದೆ ಎಂದು ಕರ್ನಾಟಕ ರೈತ ಸಂಘ ಹಾಗೂ ಹಸಿರು ಸೇನೆ ಪದಾಧಿಕಾರಿಗಳು ಮತ್ತು ಸ್ಥಳೀಯ ರೈತರು ಆರೋಪಿಸಿದ್ದಾರೆ.**

ಕೃಷ್ಣ 'ಬಿ' ಸ್ಕೀಮ್‌ನ ನೀರನ್ನು ಟ್ರಿಪ್ ಇರಿಗೇಶನ್‌ಗಾಗಿ ಬಳಸಬೇಕೆಂಬ ಉದ್ದೇಶವಿದ್ದರೂ, ಕೆರೆ ತುಂಬಿಸುವ ಯೋಜನೆಗೆ ನೀರನ್ನು ಬಳಸಲಾಗುತ್ತಿದೆ ಎಂಬ ಆರೋಪವನ್ನು ರೈತರು ಮಾಡಿದ್ದಾರೆ. ಈ ಕುರಿತು ಸಂಬಂಧಿಸಿದ ಅಧಿಕಾರಿಗಳು ಯೋಜನೆಯ ನಿಯಮಗಳು, ನೀರಿನ ಬಳಕೆ ಹಾಗೂ ಹಂಚಿಕೆ ಕುರಿತು ರೈತರಿಗೆ ಸ್ಪಷ್ಟ ಮಾಹಿತಿ ನೀಡಬೇಕು ಎಂದು ಒತ್ತಾಯಿಸಿದ್ದಾರೆ. ಸೋಮಸಾಗರ ಹಳ್ಳಕ್ಕೆ ನೀರು ಹರಿಸದ ಆರೋಪ ಕನಕಗಿರಿ ತಾಲೂಕಿನ ಸೋಮಸಾಗರ ಹಾಗೂ ಅಡಿವಿಬಾಯಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ವ್ಯಾಪ್ತಿಯಲ್ಲಿ ಹರಿಯಬೇಕಾದ ನೀರನ್ನು ಸಮರ್ಪಕವಾಗಿ ಹರಿಸಲಾಗುತ್ತಿಲ್ಲ ಎಂಬುದು ರೈತರ ಪ್ರಮುಖ ಆರೋಪವಾಗಿದೆ.

ಕಳೆದ ಒಂದು ವರ್ಷ ಕಾಲ ಈ ಭಾಗಕ್ಕೆ ನೀರು ಹರಿದ ಸಂದರ್ಭದಲ್ಲಿ ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗುವುದರ ಜೊತೆಗೆ ಗ್ರಾಮೀಣ ಪ್ರದೇಶದ ಜಾನುವಾರು, ಕುರಿ?ಮೇಕೆ ಸೇರಿದಂತೆ ಪಶು?ಪ್ರಾಣಿಗಳಿಗೆ ಹಾಗೂ ವಿವಿಧ ಪಕ್ಷಿಗಳಿಗೆ



ನೀರಿನ ಆಸರೆ ದೊರೆತಿತ್ತು. ಆದರೆ ಇದೀಗ ನೀರು ಹರಿಸುವಿಕೆಯಲ್ಲಿ ವ್ಯತ್ಯಯ ಉಂಟಾಗಿರುವುದರಿಂದ ರೈತರು ಹಾಗೂ ಗ್ರಾಮಸ್ಥರು ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ. "ಒಂದು ವರ್ಷ ಕಾಲ ನೀರು ಹರಿಸಿ ಈಗ ಏಕೆ ನೀರು ಬಿಡುತ್ತಿಲ್ಲ? ನೀರು ಹರಿಸುವುದನ್ನು ನಿಲ್ಲಿಸಲು ಕಾರಣವೇನು? ಯೋಜನೆಯಡಿ ಯಾವ ಭಾಗಕ್ಕೆ ಎಷ್ಟು ನೀರು ಹರಿಸಬೇಕು ಎಂಬುದರ ಬಗ್ಗೆ ಅಧಿಕಾರಿಗಳು ಸ್ಪಷ್ಟ ಮಾಹಿತಿ ನೀಡಬೇಕು" ಎಂದು ರೈತರು ಪ್ರಶ್ನಿಸಿದ್ದಾರೆ.

ಅಧಿಕಾರಿಗಳನ್ನು ಪ್ರಶ್ನಿಸಿದರೆ ಅವಾಚ್ಯ ಶಬ್ದ ಬಳಕೆ? ನೀರಿನ ವಿಚಾರವಾಗಿ ಅಧಿಕಾರಿಗಳನ್ನು ಪ್ರಶ್ನಿಸಿದ ಸ್ಥಳೀಯರಾದ ರೇಣುಕಪ್ಪ, ಅವರಿಗೆ ಅವಾಚ್ಯ ಶಬ್ದಗಳನ್ನು ಬಳಸಿ ಮಾತನಾಡಲಾಗಿದೆ ಎಂದು ಆರೋಪಿಸಿದ್ದಾರೆ. ಅಧಿಕಾರಿಗಳ ವರ್ತನೆಯಿಂದ ಮನನೊಂದಿರುವ ಅವರು, ತಮ್ಮ ನೋವನ್ನು ಪತ್ರಿಕೆಯ ಮುಂದೆ ವ್ಯಕ್ತಪಡಿಸಿದ್ದಾರೆ. ರೈತರ ಸಮಸ್ಯೆಗಳನ್ನು ಆಲಿಸಿ ಸೂಕ್ತ ಮಾಹಿತಿ ನೀಡಬೇಕಾದ ಅಧಿಕಾರಿಗಳು ಜನರೊಂದಿಗೆ ಗೌರವಯುತವಾಗಿ ನಡೆದುಕೊಳ್ಳಬೇಕು. ಯೋಜನೆ ಕುರಿತು ಮಾಹಿತಿ ಕೇಳುವ ರೈತರಿಗೆ ಸ್ಪಷ್ಟ ಉತ್ತರ ನೀಡಬೇಕು ಎಂದು ಕರ್ನಾಟಕ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಅಧ್ಯಕ್ಷರು ಗಣೇಶ್ ರೆಡ್ಡಿ ಆಗ್ರಹಿಸಿದ್ದಾರೆ. ಹಳ್ಳಕ್ಕೆ ನೀರು ಹರಿಸಿದರೆ ರೈತರು, ಜಾನುವಾರುಗಳಿಗೆ ಅನುಕೂಲ ಕನಕಗಿರಿ ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿನ



ಹಳ್ಳಗಳಿಗೆ ನೀರು ಹರಿಸಿದರೆ ರೈತರಿಗೆ ಮಾತ್ರವಲ್ಲದೆ ಜಾನುವಾರು, ಪಶು?ಪ್ರಾಣಿಗಳು ಹಾಗೂ ಪಕ್ಷಿಗಳಿಗೂ ಹೆಚ್ಚಿನ ಅನುಕೂಲವಾಗಲಿದೆ ಎಂಬುದು ಸ್ಥಳೀಯರ ಅಭಿಪ್ರಾಯವಾಗಿದೆ.

ಹಳ್ಳಗಳಲ್ಲಿ ನೀರು ಹರಿಯುವುದರಿಂದ ಜಾನುವಾರುಗಳಿಗೆ ಕುಡಿಯುವ ನೀರು ದೊರೆಯುವುದರ ಜೊತೆಗೆ ಕೃಷಿ ಪ್ರದೇಶಗಳಲ್ಲಿ ತೇವಾಂಶ ಹೆಚ್ಚಾಗುವ ಸಾಧ್ಯತೆ ಇದೆ. ಅಂತರ್ಜಲ ಮಟ್ಟ ಸುಧಾರಣೆಯಾಗುವ ಮೂಲಕ ಬಾವಿ ಹಾಗೂ ಕೊಳವೆಬಾವಿಗಳ ಮೇಲೂ ಸಕಾರಾತ್ಮಕ ಪರಿಣಾಮ ಬೀರುವ ನಿರೀಕ್ಷೆಯಿದೆ. ಗ್ರಾಮೀಣ ಪ್ರದೇಶದಲ್ಲಿ ನೀರಿನ ಮೂಲಗಳು ಉಳಿದರೆ ಪಕ್ಷಿ?ಪ್ರಾಣಿಗಳಿಗೂ ಜೀವಜಲದ ಆಸರೆ ಸಿಗಲಿದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ. ಯೋಜನೆಯ ಉದ್ದೇಶ ಸ್ಪಷ್ಟಪಡಿಸಲು ಒತ್ತಾಯ ಕೊಪ್ಪಳ ಏತ ನೀರಾವರಿ ಯೋಜನೆ ಮತ್ತು ಕೃಷ್ಣ 'ಬಿ' ಸ್ಕೀಮ್‌ನ ನಿಜವಾದ ಉದ್ದೇಶವೇನು, ನೀರನ್ನು ಯಾವ ರೀತಿಯಲ್ಲಿ ಬಳಸಬೇಕು, ಯಾವ ಪ್ರದೇಶಗಳಿಗೆ ನೀರು ಹರಿಸಬೇಕು ಹಾಗೂ ಕೆರೆ?ಹಳ್ಳಗಳಿಗೆ ನೀರು ತುಂಬಿಸುವ ಕುರಿತು ಇರುವ ನಿಯಮಗಳೇನು ಎಂಬುದನ್ನು ಅಧಿಕಾರಿಗಳು ಸಾರ್ವಜನಿಕವಾಗಿ ಸ್ಪಷ್ಟಪಡಿಸಬೇಕು ಎಂದು ರೈತರು ಒತ್ತಾಯಿಸಿದ್ದಾರೆ.

ಯೋಜನೆಯ ಹೆಸರಿನಲ್ಲಿ ರೈತರಲ್ಲಿ ಗೊಂದಲ ಉಂಟಾಗದಂತೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಗ್ರಾಮಗಳಿಗೆ ಭೇಟಿ ನೀಡಿ ರೈತರೊಂದಿಗೆ ಸಭೆ ನಡೆಸಿ ಮಾಹಿತಿ ನೀಡಬೇಕು. ಸೋಮಸಾಗರ ಹಳ್ಳ ಸೇರಿದಂತೆ ಅಗತ್ಯವಿರುವ ಗ್ರಾಮೀಣ ಪ್ರದೇಶಗಳಿಗೆ ನೀರು ಹರಿಸುವ ಕುರಿತು ಕ್ರಮ ಕೈಗೊಳ್ಳಬೇಕು ಎಂದು ರೈತರು ಆಗ್ರಹಿಸಿದ್ದಾರೆ. ರೈತ ಸಂಘದ ಮುಖಂಡರ ನೇತೃತ್ವದಲ್ಲಿ ಸ್ಥಳೀಯರ ಆಗ್ರಹ ಈ ಸಂದರ್ಭದಲ್ಲಿ ಕರ್ನಾಟಕ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಅಧ್ಯಕ್ಷ ಗಣೇಶ ರೆಡ್ಡಿ, ತಾಲೂಕು ಅಧ್ಯಕ್ಷ ಬಸವರಾಜ ದೇಸಾಯಿ, ಶರಣಪ್ಪ ಎಚ್. ನಾಯಕ್, ರೇಣುಕಪ್ಪ (ಗ್ರಾಮ ಪಂಚಾಯಿತಿ ಸದಸ್ಯ) ಸೇರಿದಂತೆ ಸೋಮಸಾಗರ ಹಾಗೂ ಅಡಿವಿಬಾಯಿ ಗ್ರಾಮದ ಗ್ರಾಮಸ್ಥರು ಉಪಸ್ಥಿತರಿದ್ದು, ನೀರಿನ ಸಮಸ್ಯೆ ಹಾಗೂ ಯೋಜನೆಯ ಅನುಷ್ಠಾನದ ಕುರಿತು ತಮ್ಮ ಅಸಮಾಧಾನ ವ್ಯಕ್ತಪಡಿಸಿದರು. ರೈತರ ಬದುಕು, ಜಾನುವಾರುಗಳ ನೀರಿನ ಅವಶ್ಯಕತೆ ಹಾಗೂ ಗ್ರಾಮೀಣ ಪರಿಸರದ ಹಿತದೃಷ್ಟಿಯಿಂದ ಸಂಬಂಧಿಸಿದ ಅಧಿಕಾರಿಗಳು ಕೂಡಲೇ ಸ್ಥಳ ಪರಿಶೀಲನೆ ನಡೆಸಿ, ಸೋಮಸಾಗರ ಹಳ್ಳ ಸೇರಿದಂತೆ ಅಗತ್ಯವಿರುವ ಪ್ರದೇಶಗಳಿಗೆ ನೀರು ಹರಿಸುವ ಕ್ರಮ ಕೈಗೊಳ್ಳಬೇಕು. ಅಲ್ಲದೆ, ಯೋಜನೆಯ ಕುರಿತು ರೈತರಿಗೆ ಅಧಿಕೃತ ಹಾಗೂ ಸಮಗ್ರ ಮಾಹಿತಿ ನೀಡಬೇಕು ಎಂಬುದು ಗ್ರಾಮಸ್ಥರ ಒಕ್ಕೊರಲಿನ ಆಗ್ರಹವಾಗಿದೆ.

## ಶಿಕ್ಷಕರ ದಿನಾಚರಣೆ ಆಚರಣೆ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ನಗರದ ಶ್ರೀಗವಿಸಿದ್ದೇಶ್ವರ ಸಂಯುಕ್ತ ಪ್ರೌಢಶಾಲೆ ಕೊಪ್ಪಳದಲ್ಲಿ ಆದರ್ಶ ಶಿಕ್ಷಕ ಸರ್ವೆಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನದ ನಿಮಿತ್ಯವಾಗಿ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು.**



ಈ ಸಂದರ್ಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯ ಅಮರೇಶ ಕರಡಿ, ಎಲ್ಲಾ ಶಿಕ್ಷಕರು ಸರ್ವೆಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಹಿರಿಯ ಶಿಕ್ಷಕ ಎ.ಎಸ್. ಗುಂಡನಗೌಡರ ಅವರು ರಾಧಾಕೃಷ್ಣನ್ ಅವರ ಜೀವನ ಅವರು ಸಾಧನೆಗೈದ ಕಾರ್ಯವನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. ವಿದ್ಯಾರ್ಥಿಗಳು ಶಿಕ್ಷಕರ ದಿನಾಚರಣೆ ಕುರಿತು ಮಾತನಾಡಿದರು. ಬಿ. ನಾಗರಾಜ ಕಾರ್ಯಕ್ರಮದ ನಿರೂಪಣೆ ಮಾಡಿದರು. ಈ ಸಂದರ್ಭದಲ್ಲಿ ಶಿಕ್ಷಕರು, ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಅಜಾತ ಶತ್ರು
ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

## ರಾಜ್ಯದ ಪ್ರತಿ ಮನೆ ಬಾಗಿಲಿಗೆ ಸರ್ಕಾರದ ಯೋಜನೆಗಳು ತಲುಪಬೇಕೆಂಬುದು ಪ್ರಜಾಸೇವಾ ಆಂದೋಲನ ಸಭೆಯ ಮುಖ್ಯ ಉದ್ದೇಶ: ಕೆ.ಪಿ.ಮೋಹನರಾಜ್

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ರಾಜ್ಯ ಸರ್ಕಾರವು ಪ್ರತಿಯೊಬ್ಬ ಪ್ರಜೆಯನ್ನು ತಲುಪಬೇಕು. ನಿಮ್ಮ ಅಹವಾಲನ್ನು ಆಲಿಸಲು ಸರ್ಕಾರ ಸಿದ್ಧವಾಗಿದೆ ಎಂಬ ಸಂದೇಶವನ್ನು ಪ್ರತಿ ಮನೆಮನೆಗೆ ನೀಡಬೇಕು ಎನ್ನುವ ಆಶಯದಿಂದ ಪ್ರಜಾಸೇವಾ ಆಂದೋಲನ ಸಭೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಕೆ.ಪಿ.ಮೋಹನರಾಜ್ ಅವರು ಹೇಳಿದರು.**

ಯಲಬುರ್ಗಾ ತಾಲೂಕಿನ ಚಿಕ್ಕವಂಕಲಕುಂಟ ಗ್ರಾಮದ ಬುದ್ಧ, ಬಸವ, ಅಂಬೇಡ್ಕರ್ ಭವನದಲ್ಲಿ ಸೆ.05ರಂದು ಜಿಲ್ಲಾಡಳಿತದಿಂದ ನಡೆದ ಪ್ರಜಾಸೇವಾ ಆಂದೋಲನ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸರ್ಕಾರದ ಪ್ರತಿಯೊಂದು ಯೋಜನೆಯ ಅನುಕೂಲತೆಯನ್ನು ಗ್ರಾಮದ ಪ್ರತಿಯೊಂದು ಮನೆಗೆ ತಲುಪಿಸುವುದು, ಸಾರ್ವಜನಿಕರ ಅಹವಾಲು ಆಲಿಸಲೆಂದೇ ಪ್ರತ್ಯೇಕವಾಗಿ ಪ್ರಜಾ ಸೇವೆ ಇಲಾಖೆಯೊಂದನ್ನು ರಚನೆ



ಮಾಡಿರುವುದು ಮತ್ತು ಅಹವಾಲು ಅರ್ಜಿಗಳನ್ನು ಗುಣಾತ್ಮಕ ರೀತಿಯಲ್ಲಿ ವಿಲೇವಾರಿ ಮಾಡುವುದು ಈ ಪ್ರಜಾಸೇವಾ ಆಂದೋಲನದ ವಿಶೇಷತೆಯಾಗಿದೆ ಎಂದು ಅವರು ತಿಳಿಸಿದರು.

ಸಮಾರಂಭದಲ್ಲಿ ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಇಟ್ನಾಳ, ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವರ್ಣಿತ್ ನೇಗಿ, ಸಹಾಯಕ ಅಯುಕ್ತರಾದ ಮಹೆಬೂಬ್ ಜಿಲಾನಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು. ಮಾರುತೇಶ್ವರ ದೇವರ ದರ್ಶನ: ಗ್ರಾಮಕ್ಕೆ ಆಗಮಿಸುತ್ತಿದ್ದಂತೆ ಉಸ್ತುವಾರಿ ಕಾರ್ಯದರ್ಶಿಗಳು ಗ್ರಾಮದ ಆರಾಧ್ಯ ದೇವರಾದ ಮಾರುತೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದುಕೊಂಡರು. ಮಾಹಿತಿ ಮಳಿಗೆಗಳ ಉದ್ಘಾಟನೆ: ಕೃಷಿ, ತೋಟಗಾರಿಕೆ, ಅರಣ್ಯ, ಪಶು ಸಂಗೋಪನೆ, ರೇಷ್ಮೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಸಾರಿಗೆ ಇಲಾಖೆ, ಆಹಾರ ಇಲಾಖೆ, ಜಿಲ್ಲಾ ನಗರಾಭಿವೃದ್ಧಿ ಕೋಶ, ಶಿಕ್ಷಣ ಇಲಾಖೆ, ಆಯುಷ್ ಇಲಾಖೆ, ಆರೋಗ್ಯ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಸರ್ಕಾರದ ವಿವಿಧ ಯೋಜನೆಗಳು ಮತ್ತು ಕಾರ್ಯಕ್ರಮಗಳ ಕುರಿತ ಪ್ರದರ್ಶನ ಮಳಿಗೆಗಳನ್ನು ಉಸ್ತುವಾರಿ ಕಾರ್ಯದರ್ಶಿಗಳು ಉದ್ಘಾಟಿಸಿ, ವೀಕ್ಷಣೆ ನಡೆಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಸವಲತ್ತುಗಳ ವಿತರಣೆ: ಅರ್ಹ ಫಲಾನುಭವಿಗಳಿಗೆ ಸಮಾರಂಭದಲ್ಲಿ ವಿವಿಧ ಇಲಾಖೆಗಳಿಂದ ಆದೇಶ ಪತ್ರಗಳನ್ನು ವಿತರಣೆ ಮಾಡಲಾಯಿತು. ಸುಕನ್ಯಾ ಸಮೃದ್ಧಿ ಪಾಸ ಬುಕ್ ಗಳನ್ನು ಸಹ ನೀಡಲಾಯಿತು.

ಸಮಾರಂಭದಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ವರ್ಣಿತ್ ನೇಗಿ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾದ ನಿರ್ಮಾಲ, ಸಹಾಯಕ ಆಯುಕ್ತರಾದ ಮಹೇಬೂಬ್ ಜೀಲಾನಿ, ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕರಾದ ಶಾಮಸುಂದರ ಕಾಂಬ್ಳೆ, ಜಂಟಿ ಕೃಷಿ ನಿರ್ದೇಶಕರಾದ ಜಿಡಿ ಕೃಷ್ಣಮೂರ್ತಿ, ತೋಟಗಾರಿಕೆ ಜಂಟಿ ನಿರ್ದೇಶಕರಾದ ಕೃಷ್ಣ ಸಿ. ಉಕ್ಕುಂದ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಮಂಜುನಾಥ ಗುಂಡೂರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ. ಈಶ್ವರ ಸವಡಿ, ತಹಶೀಲ್ದಾರ ಪ್ರಕಾಶ ನಾಸಿ, ತಾ.ಪಂ ಇಓ ನೀಲಗಂಗಾ ಬಬಲಾದ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು, ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕರು, ಇತರೆ ಜನಪ್ರತಿನಿಧಿಗಳು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ಅಮೇರಿಕದ ಫಿಲಡೆಲ್ಫಿಯಾದಲ್ಲಿ ಅಕ್ಕ ರಜತ ಮಹೋತ್ಸವಕ್ಕೆ ಅದ್ದೂರಿ ಚಾಲನೆ

ಅ.ಶ. ಸುದ್ದಿ ಫಿಲಡೆಲ್ಫಿಯಾ

**ಫಿಲಡೆಲ್ಫಿಯಾ: ಕನ್ನಡಿಗರ ಜಾಗತಿಕ ಒಗ್ಗಟ್ಟು, ಕನ್ನಡ ಭಾಷೆ, ನಾಡು–ನುಡಿ ಹಾಗೂ ಸಂಸ್ಕೃತಿಯ ಸಂಭ್ರಮವನ್ನು ಸಾರುವ ಅಕ್ಕ ರಜತ ಮಹೋತ್ಸವ ವಿಶ್ವ ಕನ್ನಡ ಸಮಾವೇಶಕ್ಕೆ ಅಮೆರಿಕದ ಫಿಲಡೆಲ್ಫಿಯಾದಲ್ಲಿ ಅದ್ದೂರಿ ಚಾಲನೆ ದೊರೆತಿದೆ. ಫಿಲಡೆಲ್ಫಿಯಾದ ಪೆನ್ಸಿಲ್ವೇನಿಯಾ ಕನ್ವೆನ್ಶನ್ ಸೆಂಟರ್‌ನಲ್ಲಿ ಕನ್ನಡದ ಕಂಪು ಹಾಗೂ ಕರ್ನಾಟಕದ ಸಾಂಸ್ಕೃತಿಕ ವೈಭವ ಅನಾವರಣಗೊಂಡಿದ್ದು, ಅಮೆರಿಕದ ವಿವಿಧ ರಾಜ್ಯಗಳು ಸೇರಿದಂತೆ ಹಲವು ಭಾಗಗಳಿಂದ ಸಾವಿರಾರು ಕನ್ನಡಿಗರು ಸಮಾವೇಶದಲ್ಲಿ ಭಾಗವಹಿಸಿದ್ದಾರೆ.**

ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಸಿರಿಗೆರೆಯ ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರ ದಿವ್ಯ ಸಾನ್ನಿಧ್ಯದಲ್ಲಿ



ಉದ್ಘಾಟನಾ ಕಾರ್ಯಕ್ರಮ ನಡೆಯಿತು. ಅಕ್ಕದ ಅಧ್ಯಕ್ಷ ಮಧು ರಂಗಯ್ಯ, ಸಂಸ್ಥಾಪಕ ಅಧ್ಯಕ್ಷ ಅಮರನಾಥ ಗೌಡ, ಸಚಿವ ಶಿವರಾಜ ತಂಗಡಗಿ, ಮಾಜಿ ಸಚಿವರಾದ ಸಿ.ಎಸ್. ಪುಟ್ಟರಾಜು, ಸಾ.ರಾ. ಮಹೇಶ್, ವಿಧಾನಪರಿಷತ್ ಸದಸ್ಯ ಟಿ.ಎ. ಶರವಣ, ಮಾಜಿ ಸದಸ್ಯರಾದ ವೈ.ಎ. ನಾರಾಯಣಸ್ವಾಮಿ, ಎಚ್.ಎಂ. ರಮೇಶ್‌ಗೌಡ, ಚೌಡರೆಡ್ಡಿ ಸೇರಿದಂತೆ ಹಲವು ಗಣ್ಯರು ಪಾಲ್ಗೊಂಡಿದ್ದರು. ಮೂರು ದಿನಗಳ ಕಾಲ ನಡೆಯಲಿರುವ ರಜತ ಮಹೋತ್ಸವದಲ್ಲಿ ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಗೀತ, ಚಲನಚಿತ್ರ, ಸಂಸ್ಕೃತಿ, ಉದ್ಯಮ, ಶಿಕ್ಷಣ, ಯುವಜನತೆ ಹಾಗೂ ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಪ್ರಮುಖ ವೇದಿಕೆಗಳಿಗೆ ಮೇರು ಸಾಧಕರ ಹೆಸರು ಕನ್ನಡ ನಾಡು, ನುಡಿ, ಸಂಸ್ಕೃತಿ ಹಾಗೂ ಕಲಾ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ ಮೇರು ಸಾಧಕರಿಗೆ ಗೌರವ ಸಲ್ಲಿಸುವ ಉದ್ದೇಶದಿಂದ ಸಮಾವೇಶದ ಪ್ರಮುಖ ವೇದಿಕೆಗಳಿಗೆ ಅವರ ಹೆಸರುಗಳನ್ನು ಇಡಲಾಗಿದೆ.ಮುಖ್ಯ ಸಾಂಸ್ಕೃತಿಕ ವೇದಿಕೆಗೆ ಡಾ. ಪುನೀತ್ ರಾಜ್‌ಕುಮಾರ್ ವೇದಿಕೆ, ಮತ್ತೊಂದು ವೇದಿಕೆಗೆ ಎಸ್. ಜಾನಕಿ ವೇದಿಕೆ, ಸಾಲುಮರದ ತಿಮ್ಮಕ್ಕ ವೇದಿಕೆ ಹಾಗೂ ಕಿರುಚಿತ್ರೋತ್ಸವ ನಡೆಯುವ ಸಭಾಂಗಣಕ್ಕೆ ಶಂಕರ್ ನಾಗ್ ವೇದಿಕೆ ಎಂದು ನಾಮಕರಣ ಮಾಡಲಾಗಿದೆ. ಈ ಮೂಲಕ ಕನ್ನಡದ ಹೆಮ್ಮೆಯ ಸಾಧಕರನ್ನು ಸ್ಮರಿಸುವುದರ ಜತೆಗೆ ಅವರ ಸಾಧನೆ, ಸೇವೆ ಮತ್ತು ಕೊಡುಗೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಪ್ರಯತ್ನ ಮಾಡಲಾಗಿದೆ.

ಯುವಜನತೆ,ವೃತ್ತಿಪರರಿಗೆ ವಿಶೇಷ ಆದ್ಯತೆ ವಿದೇಶಗಳಲ್ಲಿ ಬೆಳೆಯುತ್ತಿರುವ ಎರಡನೇ ತಲೆಮಾರಿನ ಯುವ ಕನ್ನಡಿಗರನ್ನು ಕನ್ನಡ ಭಾಷೆ, ಸಂಸ್ಕೃತಿ ಹಾಗೂ ವೃತ್ತಿಪರ ಜಗತ್ತಿನೊಂದಿಗೆ ಮತ್ತಷ್ಟು ಬೆಸೆಯುವ ಉದ್ದೇಶದಿಂದ ಹಲವು ವಿನೂತನ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.ಸಾಮಾಜಿಕ ಸಮಸ್ಯೆಗಳಿಗೆ ತಂತ್ರಜ್ಞಾನದ ಮೂಲಕ ಡಿಜಿಟಲ್ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ಯುವ ತಂತ್ರಜ್ಞರಿಗಾಗಿ 'ಹ್ಯಾಕ್4ಗುಡ್' ಹ್ಯಾಕಥಾನ್ ಆಯೋಜಿಸಲಾಗಿದೆ. ಉನ್ನತ ಶಿಕ್ಷಣ, ಕಾರ್ಪೊರೇಟ್ ಉದ್ಯೋಗಾವಕಾಶಗಳು ಹಾಗೂ ವೃತ್ತಿಜೀವನದ ಮಾರ್ಗದರ್ಶನಕ್ಕಾಗಿ 'ಅಕ್ಕ ಕೆರಿಯರ್ ಕನೆಕ್ಟ್' ಕಾರ್ಯಕ್ರಮವೂ ನಡೆಯಲಿದೆ.

## ಸಾರ್ವಜನಿಕರ ಅರ್ಜಿಗಳನ್ನು ಒಂದು ವಾರದಲ್ಲಿ ಸಕಾರಾತ್ಮಕವಾಗಿ ವಿಲೇವಾರಿ ಮಾಡಿ: ಜಿಲ್ಲಾಧಿಕಾರಿ ಡಾ. ಸುರೇಶ್ ಬಿ. ಇಟ್ನಾಳ್

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಜನಸಾಮಾನ್ಯರಿಂದ ಸ್ವೀಕರಿಸಲಾದ ಕುಂದುಕೊರತೆ ಅರ್ಜಿಗಳನ್ನು ಮತ್ತೊಬ್ಬರಿಗೆ ವರ್ಗಾಯಿಸದೆ, ನಿಯಮಾನುಸಾರ ಪರಿಶೀಲಿಸಿ ಒಂದು ವಾರದೊಳಗೆ ಕನಿಷ್ಠ ಶೇಕಡ 90 ರಷ್ಟು ಅರ್ಜಿಗಳನ್ನು ಸಕಾರಾತ್ಮಕವಾಗಿ ಬಗೆಹರಿಸಬೇಕು ಎಂದು ಕೊಪ್ಪಳ ಜಿಲ್ಲಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ್ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.**

ಪ್ರಜಾಸೇವಾ ಇಲಾಖೆ ಹಾಗೂ ಜಿಲ್ಲಾಡಳಿತದ ವತಿಯಿಂದ ಸೆಪ್ಟೆಂಬರ್ 5 ರಂದು ಜಿಲ್ಲೆಯ ಯಲಬುರ್ಗಾ ತಾಲೂಕಿನ ಚಿಕ್ಕವಂಕಲಕುಂಟಾ ಗ್ರಾಮದ ಬುದ್ಧ ಬಸವ ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದ್ದ 'ಪ್ರಜಾಸೇವಾ ಆಂದೋಲನ' ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಪ್ರಜಾಸೇವಾ ಆಂದೋಲನ ಸಭೆಯಲ್ಲಿ ಕಂದಾಯ, ಸರ್ವೆ, ಎಡಿಎಲ್‌ಆರ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಜೆಸ್ಕಾಂ ಹಾಗೂ ವಸತಿ ಯೋಜನೆ ಮತ್ತು ಕುಡಿಯುವ ನೀರಿಗೆ ಸಂಬಂಧಿಸಿದ ಒಟ್ಟು 281 ಅರ್ಜಿಗಳು ಸಲ್ಲಿಕೆಯಾಗಿವೆ. ಸಾಮಾನ್ಯ ಸಮಸ್ಯೆಗಳಿಗೆ ಶೀಘ್ರ ಪರಿಹಾರ ನೀಡಬೇಕು.



ನಿವೇಶನ, ವಸತಿ ಬೇಡಿಕೆ, ಪಡಿತರ ಚೀಟಿಗೆ ಹೆಸರು ಸೇರ್ಪಡೆ, ಎಪಿಎಲ್ ಕಾರ್ಡ್‌ನಿಂದ ಬಿಪಿಎಲ್‌ಗೆ ಬದಲಾವಣೆ ಸೇರಿದಂತೆ ಹಲವು ಸಣ್ಣಪುಟ್ಟ ಸಮಸ್ಯೆಗಳನ್ನು ಸ್ಥಳೀಯ ಮಟ್ಟದಲ್ಲೇ ಪರಿಹರಿಸಲು ಸಾಧ್ಯವಿದ್ದು, ಅರ್ಜಿಗಳನ್ನು ಪೂರ್ಣವಾಗಿ ಓದಿ ಪರಿಹಾರ ಕಂಡುಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳು, ಅಧಿಕಾರಿಗಳಿಗೆ ಸಲಹೆ ನೀಡಿದರು. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಸೂಚನೆಯಂತೆ ಎಲ್ಲ ಅರ್ಜಿಗಳಿಗೂ ತ್ವರಿತವಾಗಿ ಪರಿಹಾರ ಸಿಗಬೇಕು. ನಿಯಮಗಳಲ್ಲಿ ಅವಕಾಶವಿದ್ದರೆ ಕೆಲಸ ಮಾಡಿಕೊಡಬೇಕು. ಇಲ್ಲವಾದಲ್ಲಿ ನಿಯಮಾವಳಿಯಂತೆ ಸೂಕ್ತ ಕಾರಣ ನೀಡಿ ವಿಲೇವಾರಿ ಮಾಡಬೇಕು. ಯಾವುದೇ ಕಾರಣಕ್ಕೂ ಅರ್ಜಿಗಳನ್ನು ನೆಪಮಾತ್ರಕ್ಕೆ ಬೇರೆಯವರಿಗೆ ವರ್ಗಾಯಿಸಿ ವಿಲೇವಾರಿ ಮಾಡಲಾಗಿದೆ ಎಂದು ತೋರಿಸಿಕೊಳ್ಳಲು ಸಾಧ್ಯವಿಲ್ಲ ಎಂದರು.

ಬುಧವಾರ ಅಧಿಕಾರಿಗಳ ಸರಣಿ ಪರಿಶೀಲನಾ ಸಭೆ: ಪ್ರಜಾಸೇವಾ ಆಂದೋಲನ' ಸಭೆಯಲ್ಲಿ ಸ್ವೀಕೃತವಾದ ಅರ್ಜಿಗಳ ವಿಲೇವಾರಿ ಪ್ರಕ್ರಿಯೆಯನ್ನು ಪರಿಶೀಲಿಸಲು ಬರುವ ಬುಧವಾರ ಅಧಿಕಾರಿಗಳ ಮಟ್ಟದಲ್ಲಿ ನಿರಂತರ ಸಭೆ ನಡೆಯಲಿದ್ದು, ಸ್ವೀಕೃತ ಹಾಗೂ ವಿಲೇವಾರಿಯಾದ ಅರ್ಜಿಗಳ ಪರಿಶೀಲನೆಯು ಅಂದು ಬೆಳಿಗ್ಗೆ 9 ರಿಂದ 11 ಗಂಟೆಯವರೆಗೆ ತಹಶೀಲ್ದಾರ್ ಅವರಿಂದ ನಡೆಯಲಿದೆ. ಬಳಿಕ ಬೆಳಿಗ್ಗೆ 11 ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಸಹಾಯಕ ಆಯುಕ್ತರಿಂದ ಪರಿಶೀಲನೆ. ನಂತರ ಮಧ್ಯಾಹ್ನ 12 ರಿಂದ 1 ಗಂಟೆಯವರೆಗೆ ಜಿಲ್ಲಾ ಮಟ್ಟದ ಅಧಿಕಾರಿಗಳ ಜತೆ ಅಂತಿಮ ಪರಿಶೀಲನೆಯನ್ನು ತಾವು ಖುದ್ದಾಗಿ ಕೈಗೊಳ್ಳುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿದರು.

ಸಮಸ್ಯೆಗಳು ಸಂಪೂರ್ಣವಾಗಿ ಬಗೆಹರಿಯುವವರೆಗೂ ಇಂತಹ ಪರಿಶೀಲನಾ ಸಭೆಗಳು ಮುಂದುವರಿಯಲಿದ್ದು, ಸೋಮವಾರ ಅಥವಾ ಮಂಗಳವಾರದೊಳಗೆ ಅಧಿಕಾರಿಗಳು ಅರ್ಜಿಗಳನ್ನು ವಿಲೇವಾರಿ ಮಾಡಬೇಕು ಎಂದು ಜಿಲ್ಲಾಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪ್ರಜಾಸೇವಾ ಆಂದೋಲನ ಸಭೆಗೆ ಸಮಾಜ ಕಲ್ಯಾಣ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಕೆ.ಪಿ. ಮೋಹನರಾಜ್ ಅವರು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ವರ್ಣಿತ್ ನೇಗಿ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾದ ನಿರ್ಮಾಲ, ಸಹಾಯಕ ಆಯುಕ್ತರಾದ ಮಹೇಬೂಬ್ ಜೀಲಾನಿ, ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕರಾದ ಶಾಮಸುಂದರ ಕಾಂಬ್ಳೆ,

ಜಂಟಿ ಕೃಷಿ ನಿರ್ದೇಶಕರಾದ ಜಿಡಿ ಕೃಷ್ಣಮೂರ್ತಿ, ತೋಟಗಾರಿಕೆ ಜಂಟಿ ನಿರ್ದೇಶಕರಾದ ಕೃಷ್ಣ ಸಿ. ಉಕ್ಕುಂದ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಮಂಜುನಾಥ ಗುಂಡೂರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ. ಈಶ್ವರ ಸವಡಿ, ತಹಶೀಲ್ದಾರ ಪ್ರಕಾಶ ನಾಸಿ, ತಾ.ಪಂ ಇಓ ನೀಲಗಂಗಾ ಬಬಲಾದ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು, ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕರು, ಇತರೆ ಜನಪ್ರತಿನಿಧಿಗಳು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka